ಸ್ಥಾಪನೆ -2010

# ಹೊಸ ನಾವಿಕ

HOSA NAVIKA KANNADA DAILY EVENING NEWS PAPER

RNI - KARKAN/2010/32092 Post. Reg No. KA/SK/SMG-1210/2019-21

e-mail: hosanavika@gmail.com Website: www.hosanavika.com WhatsApp: 948 248 2182

ಸಂಪುಟ: 14 ಸಂಚಿಕೆ : 189 ಪುಟಗಳು: 04 ಬಿಡಿ ಪ್ರತಿ: ರೂ. 2.00 ಮಾಸಿಕ ಚಂದಾ :ರೂ.50 ದಿನಾಂಕ: 21-08-2023 ಸೋಮವಾರ

ವ್ಯವಸ್ಥಾಪಕ ಸಂಪಾದಕ: ಎಂ.ಪಿ.ಎಂ.ಷಣ್ಮುಖಯ್ಯ ಸುದ್ದಿಸಂಪಾದಕ : ಎಂ.ಪಿ.ಎಂ. ಚನ್ನಬಸಯ್ಯ

## ಏಷ್ಯಾಕಪ್ ಟೂರ್ನಿಗೆ ಟೀಂಇಂಡಿಯಾ ಪ್ರಕಟ

# ರಾಹುಲ್, ಶ್ರೇಯಸ್, ಬುಮ್ರಾಗೆ ಅವಕಾಶ



ಬೆಂಗಳೂರು: ತೀವ್ರ ಕುತೂಹಲ ಮೂಡಿಸಿದ್ದ ಏಷ್ಯಾಕಪ್ ಟೂರ್ನಿಗೆ ಟೀಂ ಇಂಡಿಯಾದ 17 ಸದಸ್ಯರ ಬಲಿಷ್ಠ ತಂಡವನ್ನು ಅಜಿತ್ ಅಗರ್ಕರ್ ಸಾರಥ್ಯದ ಆಯ್ಕೆ ಮಂಡಳಿಯು ಪ್ರಕಟಿಸಿದ್ದು ಕೆಲವು ಆಶ್ಚರ್ಯಕರ ತೀರ್ಮಾನಗಳನ್ನು ಕೈಗೊಂಡಿದ್ದಾರೆ.

**ರೋಹಿತ್‌ಗೆ ಕ್ಯಾಪ್ಟನ್‌ಶಿಪ್:**

ತವರಿನ ಅಂಗಳದಲ್ಲಿ ಅ.5 ರಿಂದ ನ.19ರವರೆಗೆ ನಡೆಯಲಿರುವ ಪ್ರತಿಷ್ಠಿತ ಏಕದಿನ ವಿಶ್ವಕಪ್ ಟೂರ್ನಿಗೆ ಬಲಿಷ್ಠ ತಂಡವನ್ನು ಕಟ್ಟಲು ಮುಂದಾಗಿರುವ ಆಯ್ಕೆ ಮಂಡಳಿಯು ಏಷ್ಯಾಕಪ್ ಟೂರ್ನಿಯ ಮೂಲಕವೇ ಕಾರ್ಯಾಚರಣೆಗೆ ಮುಂದಾಗಿದ್ದು, ಹಿಟ್‌ಮ್ಯಾನ್ ರೋಹಿತ್ ಶರ್ಮಾ ತಂಡವನ್ನು ಮುನ್ನಡೆಸಲಿದ್ದಾರೆ. ಹಾರ್ದಿಕ್ ಪಾಂಡ್ಯರನ್ನು ಉಪನಾಯಕರಾಗಿ ಆಯ್ಕೆ ಮಾಡಲಾಗಿದೆ.

**ರಾಹುಲ್, ಶ್ರೇಯಸ್, ಬುಮ್ರಾ ಇನ್:**

ಆಟಗಾರರ ಫಿಟ್ನೆಸ್ ಬಗ್ಗೆ ಪೂರ್ಣ ಮಾಹಿತಿ ಪಡೆಯುವ ಸಲುವಾಗಿ ಏಷ್ಯಾಕಪ್ ಟೂರ್ನಿಗೆ ತಂಡವನ್ನು ಪ್ರಕಟಿಸಲು ಬಿಸಿಸಿಐ ಸೆಲೆಕ್ಟರ್ಸ್‌ಗಳು ತಡ ಮಾಡಿದ್ದರೂ, ಈಗ ಆಟಗಾರರ ಫಿಟ್ನೆಸ್‌ನ ಬಗ್ಗೆ ಸಂಪೂರ್ಣ ಮಾಹಿತಿ ದೊರಕಿದ್ದು, ಇಂದು ತಂಡವನ್ನು ಪ್ರಕಟಿಸಿ ಕುತೂಹಲಗಳಿಗೆ ಅಂತಿಮ ತೆರೆ ಎಳೆದಿದ್ದಾರೆ.

ಐಪಿಎಲ್ ವೇಳೆ ಗಾಯಗೊಂಡಿದ್ದ ಕನ್ನಡಿಗ ಕೆ.ಎಲ್. ರಾಹುಲ್, ಬೆನ್ನು ನೋವಿನ ಸಮಸ್ಯೆ ಎದುರಿಸುತ್ತಿದ್ದ ಶ್ರೇಯಾಸ್ ಅಯ್ಯರ್ ಅವರು ತಂಡಕ್ಕೆ ಮರಳಿದ್ದು ಮಧ್ಯಮ ಕ್ರಮಾಂಕದ ಸಮಸ್ಯೆಗೆ ಪರಿಹಾರ ಸಿಕ್ಕಂತಾಗಿದೆ. ಅಲ್ಲದೆ ಐರ್ಲೆಂಡ್ ಸರಣಿಯಲ್ಲಿ ಪರ್ಫೆಕ್ಟ್ ಕಮ್‌ಬ್ಯಾಕ್ ಮಾಡಿರುವ ವೇಗಿಗಳಾದ ಜಸ್ಪ್ರಿತ್ ಬುಮ್ರಾ ಹಾಗೂ ಕನ್ನಡಿಗ ಪ್ರಸಿಧ್ ಕೃಷ್ಣ ಅವರು ಕೂಡ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

**ತಿಲಕ್ ವರ್ಮಾಗೆ ಛಾನ್ಸ್:**

ಇತ್ತೀಚೆಗೆ ವೆಸ್ಟ್ ಇಂಡೀಸ್ ವಿರುದ್ಧ ಟಿ20-ಐ ಸರಣಿಯಲ್ಲಿ ಉತ್ತಮ ಪ್ರದರ್ಶನ ತೋರಿ ಗಮನ ಸೆಳೆದಿದ್ದ ಯುವ ಆಟಗಾರ ತಿಲಕ್‌ವರ್ಮಾಗೂ ತಂಡದಲ್ಲಿ ಸ್ಥಾನ ನೀಡಿದ್ದು, ಮಧ್ಯಮ ಕ್ರಮಾಂಕವನ್ನು ಬಲಿಷ್ಠಗೊಳಿಸಲು ಮುಂದಾಗಿದೆಯಾದರೂ ಸೂರ್ಯಕುಮಾರ್ ಯಾದವ್‌ಗೂ ಅವಕಾಶ ಲಭಿಸಿದ್ದು, ಸಂಜು ಸ್ಯಾಮ್ಸನ್‌ರನ್ನು ತಂಡದಿಂದ ಹೊರಗಿಡಲಾಗಿದ್ದು, ಮೀಸಲು ವಿಕೆಟ್‌ಕೀಪರ್ ಆಗಿ ಸ್ಥಾನ ಪಡೆದಿದ್ದಾರೆ. ಸ್ಪಿನ್ನರ್ ರೂಪದಲ್ಲಿ ಚೈನಾಮನ್ ಸ್ಪಿನ್ನರ್ ಕುಲ್ದೀಪ್‌ಯಾದವ್‌ಗೆ ಸ್ಥಾನ ಕಲ್ಪಿಸಲಾಗಿದ್ದು, ಲೆಗ್ ಸ್ಪಿನ್ನರ್ ಯುಜ್ವೇಂದ್ರ ಚಹಾಲ್‌ಗೆ ಕೊಕ್ ಕೊಡಲಾಗಿದೆ.

**ಏಷ್ಯಾಕಪ್‌ಗೆ ಟೀಮ್ ಇಂಡಿಯಾದ 17 ಸದಸ್ಯರ ತಂಡ:**

ರೋಹಿತ್ ಶರ್ಮಾ (ನಾಯಕ), ಶುಭಮನ್ ಗಿಲ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಕೆ.ಎಲ್. ರಾಹುಲ್, ಸೂರ್ಯಕುಮಾರ್ ಯಾದವ್, ತಿಲಕ್ ವರ್ಮಾ, ಇಶಾನ್ ಕಿಶನ್, ಹಾರ್ದಿಕ್ ಪಾಂಡ್ಯ, ರವೀಂದ್ರ ಜಡೇಜಾ, ಅಕ್ಷರ್‌ಪಟೇಲ್, ಶಾರ್ದೂಲ್ ಠಾಕೂರ್, ಜಸ್ಪ್ರಿತ್ ಬುಮ್ರಾ, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಕುಲದೀಪ್ ಯಾದವ್, ಪ್ರಸಿಧ್ ಕೃಷ್ಣ.

**ಟೂರ್ನಿ ಆರಂಭ:**

ಶ್ರೀಲಂಕಾ ಹಾಗೂ ಪಾಕಿಸ್ತಾನದ ಆತಿಥ್ಯದಲ್ಲಿ ಆ.30 ರಿಂದ ಸೆ. 19ರವರೆಗೆ ನಡೆಯಲಿದ್ದು, ಸೆ.2 ರಂದು ನಡೆಯಲಿರುವ ಸಂಪ್ರದಾಯಿಕ ವೈರಿ ಪಾಕಿಸ್ತಾನ ನಡುವಿನ ಹೈವೋಲ್ಟೇಜ್ ಪಂದ್ಯದ ಮೂಲಕ ರೋಹಿತ್ ಶರ್ಮಾ ಪಡೆ ಅಭಿಯಾನ ಆರಂಭಿಸಲಿದೆ.

**ಭಾಗವಹಿಸಲಿರುವ ತಂಡಗಳು:**

ಹಾಲಿ ಚಾಂಪಿಯನ್ ಶ್ರೀಲಂಕಾ, 7ಬಾರಿ ಚಾಂಪಿಯನ್‌ಪಟ್ಟ ಅಲಂಕರಿಸಿರುವ ಟೀಮ್ ಇಂಡಿಯಾ, ಪಾಕಿಸ್ತಾನ, ಆಫ್ಘಾನಿಸ್ತಾನ, ಬಾಂಗ್ಲಾದೇಶ ತಂಡದ ಜೊತೆಗೆ ನೇಪಾಳ ತಂಡ ಹೊಸದಾಗಿ ಸೇರ್ಪಡೆಯಾಗಿದೆ.

## ಶ್ರಾವಣ ಮಾಸದ ಹಬ್ಬಗಳ ವಿವರ

(ಮುರುಳೀಧರ್ . ಹೆಚ್. ಸಿ)

ಶಿವಮೊಗ್ಗ: ಈಗಾಗಲೇ ಶ್ರಾವಣ ಮಾಸ ಶುಭಾರಂಭಗೊಂಡದ್ದು, ಸಂಭ್ರಮ ಸಂತಸದ ಹಬ್ಬಗಳ ಸಾಲು ನಮ್ಮ ಮುಂದಿದೆ. ಆ. 21ರ ಇಂದು ನಾಗರ ಪಂಚಮಿ, ಆ.22ರ ನಾಳೆ (ಮಂಗಳವಾರ) ಮಂಗಳ ಗೌರಿ ವ್ರತ ಆಚರಿಸಲಿದ್ದೇವೆ.

ಅಂತೆಯೇ ಆ.25ರ ಶುಕ್ರವಾರ ವರಮಹಾಲಕ್ಷ್ಮೀ ವ್ರತ, ಆ.26ರ ಶನಿವಾರ ಎರಡನೆಯ ಶ್ರಾವಣ ಶನಿವಾರ, ಆ.29ರ ಮಂಗಳ ವಾರ, ಮಂಗಳಗೌರಿ ವ್ರತ ಹಾಗೂ ಋಗ್ವೇದ ಉಪಾಕರ್ಮ, ಆ.30ರ ಬುಧವಾರ ಯಜುರ್ ಉಪಾಕರ್ಮ ಹಾಗೂ ರಕ್ಷಾಬಂಧನ, 31ರ ಗುರುವಾರ ನೂಲು ಹುಣ್ಣಿಮೆ ಇರುತ್ತದೆ.

ಸೆಪ್ಟೆಂಬರ್ 1ರ ಶುಕ್ರವಾರ, ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆ, ಸೆ.2ರ ಶನಿವಾರ, ಮೂರನೆಯ ಶ್ರಾವಣ ಶನಿವಾರ, ಸೆ.5ರ ಮಂಗಳವಾರ ಮಂಗಳ ಗೌರಿ ವ್ರತ, ಸೆ.6ರ ಬುಧವಾರ ಶ್ರೀ ಕೃಷ್ಣ ಜನ್ಮಾಷ್ಟಮಿ, ಸೆ.8ರ ಶುಕ್ರವಾರ, ಕೊನೆಯ ಶ್ರಾವಣ ಶುಕ್ರವಾರ. ಸೆ.9ರ ಶನಿವಾರ ಕೊನೆಯ ಶ್ರಾವಣ ಶನಿವಾರ, ಸೆ.12ರ ಮಂಗಳ ವಾರ, ಮಂಗಳ ಗೌರಿ ವ್ರತ, ಸೆ.14ರ ಗುರುವಾರ ಅಮಾವಾಸ್ಯೆ, ಸೆ.15ರ ಶುಕ್ರವಾರ ಭಾದ್ರಪದ ಮಾಸ ಆರಂಭವಾಗಲಿದೆ.

ಸೆ.18ರ ಸೋಮವಾರ ಸ್ವರ್ಣ ಗೌರಿ ಹಾಗೂ ವರಸಿದ್ಧಿ ವಿನಾಯಕ ವ್ರತ. ಸೆ.19ರ ಮಂಗಳ ವಾರ ಋಷಿ ಪಂಚಮಿ, ಸೆ.28ರ ಗುರುವಾರ ಶ್ರೀ ಅನಂತ ಪದ್ಮನಾಭ ಸ್ವಾಮಿ ವ್ರತ, ಸೆ.30ರ ಶನಿವಾರ ಪಿತೃಪಕ್ಷ ಆರಂಭವಾಗಲಿದೆ.

ಅ.14ರ ಶನಿವಾರ, ಮಹಾಲಯ ಅಮಾವಾಸ್ಯೆ, ಅ.15ರ ಭಾನುವಾರ ಶ್ರೀ ಶರನ್ನವರಾತ್ರಿ ಆರಂಭ, ಅ.20ರ ಶುಕ್ರವಾರ, ಸರಸ್ವತಿ ಪೂಜೆ, ಅ.22ರ ಭಾನುವಾರ, ದುರ್ಗಾಷ್ಟಮಿ, ಅ.23ರ ಸೋಮವಾರ ಮಹಾನವಮಿ ಹಾಗೂ ಆಯುಧ ಪೂಜೆಯಿದ್ದು, ಅ.24ರ ಮಂಗಳವಾರ ಸಂಭ್ರಮದ ನಾಡ ಹಬ್ಬ ವಿಜಯದಶಮಿ ಆಚರಿಸಲಾಗುವುದು.

ಅ.11ರ ಶನಿವಾರ, ತ್ರಯೋದಶಿ ನೀರು ತುಂಬುವ ಹಬ್ಬ, ಅ.12ರ ಭಾನುವಾರ ನರಕ ಚತುರ್ಧಶಿ, ಅ.13ರ ಸೋಮವಾರ ದೀಪಾವಳಿ ಅಮಾವಾಸ್ಯೆ, ಅ.14ರ ಮಂಗಳವಾರ, ಬಲಿ ಪಾಡ್ಯಮಿ ಹಾಗೂ ದೀಪಾವಳಿ ಹಬ್ಬವನ್ನು ಸಂಭ್ರಮ ಸಡಗರದಿಂದ ಆಚರಿಸಲಾಗುವುದು.

## ಜೈಲ್ ವೃತ್ತದಲ್ಲಿ ಕನ್ನಡಮಯವಾದ ನೂತನ ಆಟೋ ಶೆಲ್ಟರ್‌ಉದ್ಘಾಟನೆ



ಶಿವಮೊಗ್ಗ: ಮಹಾನಗರ ಪಾಲಿಕೆ ವತಿಯಿಂದ ನಗರದ ಹೊಸಮನೆ ಬಡಾವಣೆಯ ಡಾ. ಅಂಬೇಡ್ಕರ್ ವೃತ್ತ (ಜೈಲು ವೃತ್ತ)ದ ಬಳಿ ಗೆಳೆಯರ ಬಳಗ ಆಟೋ ನಿಲ್ದಾಣಕ್ಕೆ ಪಾಲಿಕೆ ಸದಸ್ಯರ ಅನುದಾನದಲ್ಲಿ ಆಟೋ ಶೆಲ್ಟರ್ ನಿರ್ಮಿಸಿದ್ದು ಇಂದು ಪಾಲಿಕೆ ವಿಪಕ್ಷ ನಾಯಕಿ ರೇಖಾ ರಂಗನಾಥ್ ಉದ್ಘಾಟನೆ ನೆರವೇರಿಸಿದರು.

ಅಲ್ಲದೆ ಹೊಸಮನೆ 1ನೇ ಮುಖ್ಯ ರಸ್ತೆಯ ಡಾ. ಪುನೀತ್ ರಾಜ್‌ಕುಮಾರ್ ರಸ್ತೆಯ ಬನಶಂಕರಿ ಆಟೋ ನಿಲ್ದಾಣಕ್ಕೆ ನೂತನ ಆಟೋ ಶೆಲ್ಟರ್ ನಿರ್ಮಿಸಿದ್ದು ಇದೇ ಸಂದರ್ಭದಲ್ಲಿ ಉದ್ಘಾಟಿಸಲಾಯಿತು.

ಈ ಆಟೋ ನಿಲ್ದಾಣ ಸಂಪೂರ್ಣ ಕನ್ನಡಮಯವಾಗಿದ್ದು, ಸಾಹಿತಿಗಳ, ಚಿತ್ರನಟರ, ಸಾಧಕರಾದ ನಾಲ್ವಡಿ ಕೃಷ್ಣರಾಜ ಒಡೆಯರ್, ವಿಶ್ವೇಶ್ವರಯ್ಯ, ಕುವೆಂಪು, ದ.ರಾ. ಬೇಂದ್ರೆ, ಶಿವರಾಮ ಕಾರಂತರು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ವಿ.ಕೃ. ಗೋಕಾಕ್, ಯು.ಆರ್. ಅನಂತ ಮೂರ್ತಿ, ಗಿರೀಶ್ ಕಾರ್ನಾಡ್, ಚಂದ್ರಶೇಖರ್ ಕಂಬಾರ, ಡಾ. ರಾಜ್‌ಕುಮಾರ್, ಶಂಕರನಾಗ್, ಡಾ. ವಿಷ್ಣುವರ್ಧನ್, ಅಂಬರೀಷ್, ಪುನೀತ್ ರಾಜ್‌ಕುಮಾರ್, ಸಾಲುಮರದ ತಿಮ್ಮಕ್ಕ, ಮಂಜಮ್ಮ ಜೋಗತಿ ಇವರ ಭಾವಚಿತ್ರಗಳನ್ನು ಅನಾವರಣ ಮಾಡಲಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಪಾಲಿಕೆ ಸದಸ್ಯ ಹೆಚ್.ಸಿ. ಯೋಗೇಶ್, ಆಟೋ ಚಾಲಕರಿಗೆ ಅನುಕೂಲವಾಗಲಿ ಎಂದು ಈ ನಿಲ್ದಾಣ ಸ್ಥಾಪಿಸಿದೆ ಎಂದರು. ವಿಧಾನ ಪರಿಷತ್ ಮಾಜಿ ಸದಸ್ಯ ಆರ್. ಪ್ರಸನ್ನಕುಮಾರ್ ಮಾತನಾಡಿದರು. ಕೆ.ರಂಗನಾಥ್, ಆಟೋ ಚಾಲಕರು, ಮಾಲೀಕರು ಉಪಸ್ಥಿತರಿದ್ದರು.

## ಸಮೂಹ ಸಂವಹನದಿಂದ ನಾವೀನ್ಯ ಯೋಜನೆಗಳು ಸಾಧ್ಯ

## ಪೇಟೆಂಟ್ ಫೈಲಿಂಗ್ ಕಾರ್ಯಾಗಾರದಲ್ಲಿ ಡಾ. ಶ್ರೀಕಂಠೇಶ್ವರ



ಶಿವಮೊಗ್ಗ : ವಿದ್ಯಾರ್ಥಿಗಳು ಸಮೂಹ ಸಂವಹನದೊಂದಿಗೆ ಬೆರೆತು ನಾವೀನ್ಯ ಯೋಜನೆಗಳನ್ನು ರೂಪಿಸು ವಂತಾಗಬೇಕು ಎಂದು ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ಮಾಜಿ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಶ್ರೀಕಂಠೇಶ್ವರ ಸ್ವಾಮಿ ಅಭಿಪ್ರಾಯಪಟ್ಟರು.

ನಗರದ ಜೆಎನ್‌ಎನ್‌ಸಿ ಎಂಜಿನಿಯರಿಂಗ್ ಕಾಲೇಜಿನ ನಾವೀನ್ಯತೆ ಮತ್ತು ಉದ್ಯಮಶೀಲತೆ ಕೇಂದ್ರ, ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ ವತಿಯಿಂದ ಉಪನ್ಯಾಸಕರಿಗಾಗಿ ಇಂದು ಕಾಲೇಜಿನ ಸಭಾಂಗಣದಲ್ಲಿ ಏರ್ಪಡಿಸಿದ್ದ 'ಪೇಟೆಂಟ್ ಫೈಲಿಂಗ್ ಮತ್ತು ಸಂಶೋಧನಾ ಪ್ರಸ್ತಾವನೆಗಳ ಬರವಣಿಗೆ ಕಾರ್ಯಾಗಾರ' ಉದ್ಘಾಟಿಸಿ ಮಾತನಾಡಿದರು.

ಯುವ ಸಮೂಹ ತಮ್ಮ ಸುತ್ತಲಿನ ವಾತಾವ'ರ'ಣದ'ಲ್ಲಿ'ರ'ುವ' ಸಮಸ್ಯೆಗಳನ್ನೇ ನಾವೀನ್ಯತೆಯ ಮೂಲಕ ಪರಿಹರಿಸುವ ಯೋಚನೆಗಳನ್ನು ಮಾಡಬೇಕಿದೆ. ಅಂತಹ ಪ್ರೇರಣಾ ಮನೋಭಾವವನ್ನು ವಿದ್ಯಾರ್ಥಿಗಳಲ್ಲಿ ಉತ್ತೇಜಿಸುವ ಕಾರ್ಯ ಉಪನ್ಯಾಸಕರಿಂದ ಆಗಬೇಕಿದೆ.

ವಿದ್ಯಾರ್ಥಿಗಳ ನಾವೀನ್ಯ ಯೋಜನೆಗಳನ್ನು ಗೌರವಿಸುವ ಮೂಲಕ ಸಕಾರಾತ್ಮಕವಾಗಿ ಸ್ಪಂದಿಸಿ. ಕೇವಲ ಶೈಕ್ಷಣಿಕ ಚಟುವಟಿಕೆಗಳಿಗೆ ಮಾತ್ರ ನಿಮ್ಮನ್ನು ಮತ್ತು ವಿದ್ಯಾರ್ಥಿಗಳನ್ನು ಸೀಮಿತಗೊಳಿಸ ಬೇಡಿ ಎಂದು ಉಪ ನ್ಯಾಸಕರಿಗೆ ಕಿವಿ ಮಾತು ಹೇಳಿದರು.

ಎಂಎಸ್‌ಎಂಇ ಮೂಲಕ ಸರ್ಕಾರ ಸಣ್ಣ ಮತ್ತು ಮಧ್ಯಮ ಉದ್ಯಮಶೀಲತೆ ಹೆಚ್ಚು ಬೆಂಬಲವನ್ನು ನೀಡುತ್ತಿದೆ. ವಿ.ಜಿ.ಎಸ್.ಟಿ, ಕೆ.ಎಸ್.ಸಿ.ಎಸ್.ಟಿ ಮೂಲಕ ನಾವೀನ್ಯ ಯೋಚನೆಗಳನ್ನು ಯೋಜನೆಗಳನ್ನಾಗಿ ಪರಿವರ್ತಿಸಲು ಉತ್ತೇಜನೆ ನೀಡುತ್ತಿದೆ ಎಂದರು. (4ನೇ ಪುಟಕ್ಕೆ

### ಪತ್ರಕರ್ತರಿಗೆ ನಾಳೆ ಉಚಿತ ಕಣ್ಣಿನ ಪರೀಕ್ಷೆ

ಶಿವಮೊಗ್ಗ : ಶಿವಮೊಗ್ಗ ಪ್ರೆಸ್ ಟ್ರಸ್ಟ್, ಶಿವಮೊಗ್ಗ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ನಗರದ ಪ್ರತಿಷ್ಠಿತ ಶಂಕರ ಕಣ್ಣಿನ ಆಸ್ಪತ್ರೆಯ ಸಹಯೋಗದಲ್ಲಿ ಆ. 22ರ ನಾಳೆ ಬೆಳಗ್ಗೆ 10.30ರಿಂದ ಪತ್ರಕರ್ತರು ಮತ್ತವರ ಕುಟುಂಬ ಸದಸ್ಯರಿಗಾಗಿ ಉಚಿತ ಕಣ್ಣಿನ ಪರೀಕ್ಷೆ ಏರ್ಪಡಿಸಿವೆ.

ಶಂಕರ ಕಣ್ಣಿನ ಆಸ್ಪತ್ರೆಯ ತಜ್ಞ ವೈದ್ಯರು ಕಣ್ಣು ಪರೀಕ್ಷೆ , ಚಿಕಿತ್ಸೆ ಮತ್ತು ಸಲಹೆ ನೀಡುವರು ಪತ್ರಕರ್ತರು ಮತ್ತು ಅವರ ಕುಟುಂಬವರ್ಗದವರು ಈ ಶಿಬಿರದ ಪ್ರಯೋಜನ ಪಡೆದುಕೊಳ್ಳಲು ಪ್ರೆಸ್ ಟ್ರಸ್ಟ್ ಅಧ್ಯಕ್ಷ ಎನ್. ಮಂಜುನಾಥ್ ಮತ್ತು ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಗೋಪಾಲ್ ಯಡಗೆರೆ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

## ದುಷ್ಕರ್ಮಿಗಳಿಂದ ಗಾಂಧಿ ಪ್ರತಿಮೆ ಧ್ವಂಸ



ಶಿವಮೊಗ್ಗ: ಹೊಳೆಹೊನ್ನೂರು ಠಾಣೆ ವ್ಯಾಪ್ತಿಯಲ್ಲಿ ಮಹಾತ್ಮಾ ಗಾಂಧಿ ಪ್ರತಿಮೆಗೆ ಹಾನಿ ಮಾಡಲಾಗಿದೆ. ಪಟ್ಟಣದ ಮುಖ್ಯ ವೃತ್ತದಲ್ಲಿರುವ ಗಾಂಧಿ ಪ್ರತಿಮೆಗೆ ಕಿಡಿಗೇಡಿಗಳು ಹಾನಿ ಮಾಡಿದ್ದು, ಗ್ರಾಮಸ್ಥರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಗಾಂಧಿ ಪ್ರತಿಮೆಯನ್ನು ಹಾಳು ಮಾಡಿದ ಕಿಡಿಗೇಡಿಗಳ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಿಸಿದ್ದಾರೆ. ಗಾಂಧಿ ಪ್ರತಿಮೆಗೆ ಹಾನಿಗೊಳಿಸಿದ ಮಾಹಿತಿ ತಿಳಿಯುತ್ತಿದ್ದಂತೆ ಸುತ್ತಮುತ್ತಲ ಗ್ರಾಮಸ್ಥರು ಹೊಳೆಹೊನ್ನೂರಿಗೆ ದೌಡಾಯಿಸಿ ಪ್ರತಿಭಟನೆ ನಡೆಸಿದರು. ಘಟನೆಯಿಂದಾಗಿ ಕೆಲಕಾಲ ಉದ್ವಿಗ್ನಸ್ಥಿತಿ ಉಂಟಾಗಿತ್ತು. ಸ್ಥಳಕ್ಕೆ ಭೇಟಿ ನೀಡಿದ ಎಸ್‌ಪಿ ಮಿಥುನ್ ಕುಮಾರ್ ಹಾಗೂ ಪೊಲೀಸ್ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ. ಆರೋಪಿಗಳ ಪತ್ತೆಗೆ ಮೂರು ತಂಡ ರಚಿಸಲಾಗಿದೆ. ತನಿಖೆ ಮುಂದುವರಿದಿದ್ದು ಆರೋಪಿಗಳ ಬಂಧನಕ್ಕೆ ಪೊಲೀಸರು ಬಲೆ ಬೀಸಿದ್ದಾರೆ. ಪರಿಸ್ಥಿತಿ ತಿಳಿಯಾಗಿದೆ.

## ಬಿಜೆಪಿ ನಾಯಕರಿಗೀಗ ಆಪರೇಷನ್ ಹಸ್ತ ಭೀತಿ

## ಮಾಸ್ಟರ್ ಪ್ಲಾನ್ ರಚನೆಗೆ ಕಮಲ ನಾಯಕರ ಚಿಂತನೆ




ಬೆಂಗಳೂರು: ಲೋಕಸಭೆ ಚುನಾವಣೆ ತಯಾರಿ, ಆಪರೇಷನ್ ಹಸ್ತ, ಪಕ್ಷ ಸಂಘಟನೆ, ಸರ್ಕಾರದ ವಿರುದ್ಧ ಹೋರಾಟ ಸೇರಿದಂತೆ ಅನೇಕ ಪ್ರಮುಖ ವಿಚಾರಗಳ ಬಗ್ಗೆ ಬಿಜೆಪಿ ಕೋರ್ ಕಮಿಟಿ ಸಭೆಯಲ್ಲಿ ಚರ್ಚಿಸಲಾಯಿತು.

ಬಿಜೆಪಿ ಕೋರ್ ಕಮಿಟಿ ಸಭೆಯಲ್ಲಿ ಆಪರೇಷನ್ ಹಸ್ತಕ್ಕೆ ಬ್ರೇಕ್ ಹಾಕುವ ಬಗ್ಗೆ ನಾಯಕರು ಚರ್ಚಿಸಿದರು.

ಐದು ವರ್ಷ ಸರ್ಕಾರ ಇವರದ್ದೇ ಇರುತ್ತೆ. 135 ಸ್ಥಾನ ಗೆದ್ದಿದ್ರೂ, ನಮ್ಮ ಶಾಸಕರ ಮೇಲೆ ಕಣ್ಣು ಹಾಕಿದ್ದಾರೆ ಎಂದು ಕೆಲ ನಾಯಕರು ಆಕ್ರೋಶ ಹೊರಹಾಕಿದರು. ವಲಸಿಗರಲ್ಲಿ ಯರ್‍ಯಾರು ಹೋಗಬಹುದು, ಅವರನ್ನು ಹೇಗೆ ತಡೆಯಬಹುದು ಎಂಬ ಬಗ್ಗೆ ಮಾತುಕತೆ ನಡೆಸಿದರು.

ಈ ವೇಳೆ, ವಲಸಿಗರ ಜೊತೆ ಸಮಾಲೋಚನೆ ಮಾಡುವುದಾಗಿ ಸಭೆಗೆ ಮಾಜಿ ಸಿಎಂ ಯಡಿಯೂರಪ್ಪ ತಿಳಿಸಿದರು. ನೀವೇ ಅವರ ಜೊತೆ ಮಾತನಾಡುವುದು ಸೂಕ್ತ ಎಂದು ಉಳಿದ ನಾಯಕರು ಯಡಿಯೂರಪ್ಪನವರ ಅಂಗಳಕ್ಕೆ ಚೆಂಡು ಎಸೆದರು.

ರಾಜ್ಯ ಸರ್ಕಾರದ ಮೇಲೆ ಬಂದಿರುವ ಕಮಿಷನ್ ಆರೋಪ ವಿಚಾರದಲ್ಲಿ ಹೋರಾಟಕ್ಕೆ ತಂತ್ರ, ಗುತ್ತಿಗೆದಾರರು ಮಾಡಿರುವ ಆರೋಪಕ್ಕೆ ರಾಜ್ಯಾದ್ಯಂತ ಹೋರಾಟಕ್ಕೆ ರೂಪುರೇಷೆ, ಎನ್‌ಇಪಿ ರದ್ದು ಮಾಡುವ ರಾಜ್ಯ ಸರ್ಕಾರದ ಕ್ರಮ ಖಂಡಿಸಿ ಹೋರಾಟಕ್ಕೆ ಪ್ಲಾನ್, ರಾಷ್ಟ್ರೀಯ ಶಿಕ್ಷಣ ನೀತಿ ರದ್ದು ಮಾಡುವ ರಾಜ್ಯ ಸರ್ಕಾರದ ನಡೆಗೆ ವಿವಿಧ ಸ್ವರೂಪದ ಹೋರಾಟಕ್ಕೆ ರೂಪುರೇಷೆ, ಕಾಂಗ್ರೆಸ್‌ಗೆ ಮರಳುತ್ತಾರೆ ಎನ್ನಲಾದ ಎಸ್.ಟಿ. ಸೋಮಶೇಖರ್, ಶಿವರಾಮ್ ಹೆಬ್ಬಾರ್, ಬೈರತಿ ಬಸವರಾಜ್ ಮತ್ತಿತರರ ಉಳಿಸಿಕೊಳ್ಳುವ ಬಗ್ಗೆ ಚರ್ಚೆ ಬಿಬಿಎಂಪಿ ಚುನಾವಣೆ, ವಾರ್ಡ್ ಮರುವಿಂಗಡಣೆ ಅವೈಜ್ಞಾನಿಕ ಎಂದು ಕಾನೂನು ಹೋರಾಟದ ಚರ್ಚೆ, ಲೋಕಸಭೆ ಚುನಾವಣಾ ತಯಾರಿ, ಪಕ್ಷ ಸಂಘಟನೆ ಬಗ್ಗೆ ಚರ್ಚೆ, ಲೋಕಸಭೆ ಚುನಾವಣೆಗೆ ರಿವರ್ಸ್ ಆಪರೇಷನ್ ಮೊದಲಾದ ವಿಷಯಗಳ ಬಗ್ಗೆ ಸಮಿತಿ ಸಭೆಯಲ್ಲಿ ಚರ್ಚೆ ನಡೆಸಲಾಯಿತು.

ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, (2ನೇ ಪುಟಕ್ಕೆ

## ಭಾರತವೆಂಬ ಈ ಪುಣ್ಯ ಭೂಮಿಯಲ್ಲಿ ಹುಟ್ಟಿದ ನಾವೆಲ್ಲರೂ ಭಾಗ್ಯವಂತರು: ಶಾಸಕ ಶಾಂತನಗೌಡ




ಹೊನ್ನಾಳಿ : ಭಾರತ ಕೇವಲ ಒಂದು ತುಂಡು ಭೂಮಿ ಪ್ರದೇಶ ವಲ್ಲ ಅದೊಂದು ಪುಣ್ಯಭೂಮಿ, ಕರ್ಮ ಭೂಮಿ ಇಂತಹ ಭೂಮಿ ಯಲ್ಲಿ ಹುಟ್ಟಿರುವುದು ನಾವೆಲ್ಲರೂ ಪುಣ್ಯವಂತರು ಎಂದು ಶಾಸಕ ಡಿಜಿ ಶಾಸನಗೌಡ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಪುರಸಭೆ ವತಿಯಿಂದ ಆಯೋಜಿಸಿದ ನನ್ನ ಮಣ್ಣು ನನ್ನ ದೇಶ ಎಂಬ ಈ ವಿನೂತನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದ ಶಾಸಕರು, ದೇಶ ಮೊದಲು ಎನ್ನುವ ಮನೋಭಾವ ಎಲ್ಲರಲ್ಲೂ ಇರಬೇಕು. ಹಾಗೆಯೇ ಈ ದೇಶಕ್ಕಾಗಿ ಹೋರಾಡಿ ಅನಾಥರಾದ ಎಲ್ಲಾ ಸ್ವತಂತ್ರ ಹೋರಾಟಗಾರರನ್ನು ಕಾರ್ಗಿಲ್ ಯುದ್ಧದಲ್ಲಿ ಬಲಿದಾನ ಗೊಂಡ ಯೋಧರಿಗೂ ಗೌರವ ಸಲ್ಲಿಸುವ ಕೆಲಸ ಇಡೀ ದೇಶದಲ್ಲಿ ಆಗಬೇಕು ಎಂದು ಕರೆ ನೀಡಿದರು.

ದೇಶಪ್ರೇಮ ಎಂಬುದು ಕೇವಲ ವೇದಿಕೆಯಲ್ಲಿ ಮಾತನಾಡುವುದಕ್ಕೆ ಮತ್ತು ಜಾಲತಾಣಗಳಲ್ಲಿ ಸ್ಟೇಟಸ್ ಹಾಕಿಕೊಳ್ಳುವುದಕ್ಕೆ ಮಾತ್ರ ಸೀಮಿತವಾಗದೆ ಎಲ್ಲರಲ್ಲೂ ದೇಶಪ್ರೇಮ ಹಾಗೂ ದೇಶಭಕ್ತಿ ನರನಾಡಿಗಳಲ್ಲಿ ಹರಿಯಬೇಕು. ಆಗ ಮಾತ್ರ ನಮ್ಮ ಹಿರಿಯ ಹಾಗೂ ವೀರ ಯೋಧರು ನಮಗಾಗಿ ಹೋರಾಡಿದ್ದಕ್ಕೆ ಸಾರ್ಥಕತೆ ಬರುತ್ತದೆ ಎಂದು ತಿಳಿಸಿದರು.

ಇವತ್ತು ನಮ್ಮ ಮಗ ಅಥವಾ ಮಗಳು ಡಾಕ್ಟರ್ ಇಂಜಿನಿಯರ್ ಅಥವಾ ಉನ್ನತ ಹುದ್ದೆಗಳಿಗೆ ಹೋಗಬೇಕೆಂದು ಪಾಲಕರು ಆಸೆಪಡುತ್ತಾರೆ. ಆದರೆ ಯಾರು ಸಹ ನನ್ನ ಮಗ- ಮಗಳು ಯೋಧರಾಗಬೇಕೆಂದು ಹೇಳುವುದು ಕಡಿಮೆ. ರಾಷ್ಟ್ರ ನಿರ್ಮಾಣವನ್ನು ತಯಾರು ಮಾಡುವ ಶಿಕ್ಷಕನಾಗಬೇಕೆಂದು ಯಾರು ಸಹ ಪ್ರಾರ್ಥಿಸುವುದಿಲ್ಲ ಎಂದ ಅವರು, ಈಗಲಾದರೂ ಪಾಲಕರು ತಮ್ಮ ಮಕ್ಕಳಿಗೆ ದೇಶಕ್ಕಾಗಿ ಹೋರಾಟ ಮಾಡಿ ಪ್ರಾಣ ತ್ಯಾಗ ಮಾಡಿದ ವೀರ ಯೋಧರು ಹಾಗೂ ಸ್ವತಂತ್ರಕ್ಕಾಗಿ ತಮ್ಮ ಪ್ರಾಣವನ್ನೇ ಅರ್ಪಿಸಿದ ಹೋರಾಟಗಾರರ ಪರಿಚಯ ಮಾಡಿಕೊಡಿ ಮಕ್ಕಳು ಅವರಂತೆ ದೇಶಕ್ಕಾಗಿ ಹೋರಾಟ ಮಾಡುವ ದೇಶಭಕ್ತರಾಗಲಿ ಎಂದು ಪಾಲಕರಿಗೆ ಕರೆ ನೀಡಿದರು.

ಪುರಸಭೆ ಮುಖ್ಯ ಅಧಿಕಾರಿ ರಂಜಿನಿ ಅವರು ಮಾತನಾಡಿ, ಹುತಾತ್ಮ ಯೋಧರ ಸ್ಮಾರಕದ ಅರ್ಥ ಹಾಗೂ ಅಮೃತ ಕಳಸ ಯಾತ್ರೆಯನ್ನು ಆಹ್ವಾನಿಸಲಾಗಿದ್ದು ಮಣ್ಣಿನ ಕುಂಡಗಳಲ್ಲಿ ದೇಶದ ವಿವಿಧ ಭಾಗಗಳಿಂದ ಮಣ್ಣನ್ನು ಸಂಗ್ರಹಿಸಿ ದೆಹಲಿಗೆ ತೆಗೆದುಕೊಂಡು ಹೋಗಲಿದ್ದಾರೆ. ಅದರಂತೆ ನಮ್ಮ ಹೊನ್ನಾಳಿ ಪಟ್ಟಣದಲ್ಲಿ ಮಣ್ಣನ್ನು ಸಂಗ್ರಹಿಸಿ ದಾವಣಗೆರೆಗೆ ಕಳಿಸಿ ಕೊಡಲಾಗುವುದು ಅಲ್ಲಿಂದ ರಾಜಧಾನಿ ಬೆಂಗಳೂರಿಗೆ ನಂತರ ಮತ್ತೆ ಅಲ್ಲಿಂದ ದೆಹಲಿಗೆ ಕೊಂಡೊಯ್ಯಲಿದ್ದಾರೆ ಎಂದರು.

ದೆಹಲಿಯಲ್ಲಿ ವಿವಿಧ ಭಾಗಗಳಿಂದ ಬಂದ ಮಣ್ಣಿನಲ್ಲಿ ಸಸಿಗಳನ್ನು ನೆಟ್ಟು ರಾಷ್ಟ್ರೀಯ ಯುದ್ಧ ಸ್ಮಾರಕದ ಬಳಿ ಅಮೃತವಾಟಿಕೆಗಳನ್ನು ನಿರ್ಮಿಸುವುದು ಎಂದು ಕೇಂದ್ರ ಸರ್ಕಾರ ಸೂಚಿಸಿದೆ ಎಂದ ಅವರು, ಈ ವಿನೂತನ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಸಾಮಾಜಿಕ ಕಾರ್ಯಕರ್ತ ನಾಗರಾಜ್ ಅವರು ಭಾರತ ಮಾತೆಗೆ ಜೈಕಾರ ಹಾಕಿ ಯುವಕರನ್ನು ಹುರಿದುಂಬಿಸಿದರು. ಪುರಸಭಾ ಸದಸ್ಯರಾದ ಮೈಲಪ್ಪ, ರಾಜೇಂದ್ರ, ವಿಜೇಂದ್ರಪ್ಪ, ತನ್ವೀರ್, ಗಿರೀಶ್, ಕಂದಾಧಿಕಾರಿ ವಸಂತ್, ಇಂಜಿನಿಯರ್ ದೇವರಾಜ್, ರವಿ ಕುಮಾರ್ ಹಾಗೂ ಇತರರಿದ್ದರು.

# ಮತ್ತೆ ಮತ್ತೆ ನೋಡಬೇಕೆನಿಸುವ ಪೂಜ್ಯ ಮಾತೆ ಅಕ್ಕಮಹಾದೇವಿ ಪ್ರತಿಮೆ...

ಖಾಸಗಿ ಕಾರ್ಯಕ್ರಮ ನಿಮಿತ್ತ ನಾನು ನಮ್ಮ ಸ್ನೇಹಿತರೊಂದಿಗೆ ಶಿಕಾರಿಪುರಕ್ಕೆ ಸಂಜೆ 5ಗಂಟೆ ಸುಮಾರಿಗೆ ಶಿವಮೊಗ್ಗದಿಂದ ಪ್ರಯಾಣ ಬೆಳೆಸಿದೆವು. ಶಿಕಾರಿಪುರ ತಲುಪಿದಾಗ 6 ಗಂಟೆ ಹೊತ್ತು ಮುಳುಗುವ ಸಮಯವಾಗಿತ್ತು. ಆ ಸಮಯದಲ್ಲಿ ಶಿಕಾರಿಪುರದಿಂದ ಚಿಟ್ಟೂರು ಗ್ರಾಮ ಉಡುತಡಿ ಮಾರ್ಗ ಮಧ್ಯದಲ್ಲಿ ಒಂದು ಅದ್ಭುತವಾದ ಪ್ರತಿಮೆ ಕಾಣಿಸಿತು. ಆ ಪ್ರತಿಮೆ ಬೇರೆ ಯಾವುದು ಅಲ್ಲ ನಮ್ಮೆಲ್ಲರ ನೆಚ್ಚಿನ ಶರಣೆ ಪೂಜ್ಯಶ್ರೀ ಅಕ್ಕಮಹಾದೇವಿ ಅವರದ್ದು. ಈ ಅದ್ಭುತ ಪ್ರತಿಮೆ ಕಣ್ಣಿಗೆ ಬಿದ್ದ ಕೂಡಲೇ ನಮ್ಮ ಕಾರನ್ನು ಅಲ್ಲೇ ನಿಲ್ಲಿಸಿ, ಈ ಅದ್ಭುತ ಪ್ರತಿಮೆ ನೋಡಲು ಮುಂದಾದೆವು.

ವಾವ್.. ನಿಜಕ್ಕೂ ಇದೊಂದು ಅತ್ಯದ್ಭುತ ಪ್ರತಿಮೆ. ಇದನ್ನು ನಿರ್ಮಿಸಿದ ಶಿಲ್ಪಿಯ ಕೈಚಳಕ ನಿಜಕ್ಕೂ ಅಚ್ಚರಿ ಮೂಡಿಸುವಂತಿದೆ. ಪ್ರತಿಮೆ ತುಂಬಾ ಸುಂದರವಾಗಿ ಮೂಡಿ ಬಂದಿದ್ದು, ನಮ್ಮ ಮನಸ್ಸನ್ನು ಇನ್ನಷ್ಟು ಪುಳಿಕಿತಗೊಳಿಸಿತು. ಒಂದು ರೀತಿ ಪ್ರಶಾಂತವಾಗಿರುವ ಈ ಸ್ಥಳಕ್ಕೆ ಮತ್ತೆ ಮತ್ತೆ ಬರಬೇಕೆನಿಸಿತು. ಸುಂದರವಾದ ಈ ಪ್ರತಿಮೆಯನ್ನು ನೋಡಿದಷ್ಟು ಭಕ್ತಿ ಹೆಚ್ಚಾಗುತ್ತಿತ್ತು. ಈ ಪ್ರತಿಮೆಯನ್ನು ಕಂಡು ಅಕ್ಕಮಹಾದೇವಿಯ ಚರಿತ್ರೆಯನ್ನು ಮತ್ತೊಮ್ಮೆ ಓದಲೇಬೇಕೆಂದು ನಿರ್ಧರಿಸಿ, ಅಂದು ರಾತ್ರಿಯೇ ಅಕ್ಕಮಹಾದೇವಿಯ ಜೀವನ ಚರಿತ್ರೆಯ ಪುಟಗಳನ್ನು ಕಣ್ಣಾಯಿಸಿದೆ, ಆಗ ಶಿಕಾರಿಪುರ ತಾಲೂಕಿನ ಉಡುತಡಿ ಎಷ್ಟು ಪವಿತ್ರವಾದ ಸ್ಥಳವೆಂದು ನನಗೆ ಅರ್ಥವಾಯಿತು. ಈ ಪವಿತ್ರ ಸ್ಥಳದ ಬಗ್ಗೆ ಚರಿತ್ರೆಯ ಪುಟದಲ್ಲಿ ನಮಗೆ ಸಿಕ್ಕ ಕೆಲವೊಂದು ಅಂಶಗಳನ್ನು ಇಲ್ಲಿ ನಿಮ್ಮೊಂದಿಗೆ ಹಂಚಿಕೊಳ್ಳಲು ಇಚ್ಛಿಸುತ್ತೇನೆ.

ಪೂಜ್ಯ ಅಕ್ಕಮಹಾದೇವಿ ಅವರು 1130ರಲ್ಲಿ ಕರ್ನಾಟಕ ರಾಜ್ಯದ ಶಿಕಾರಿಪುರ ತಾಲೂಕಿನ ಉಡುತಡಿ ಎಂಬ ಸಣ್ಣ ಹಳ್ಳಿಯಲ್ಲಿ ಬ್ರಾಹ್ಮಣರ ಕುಟುಂಬದಲ್ಲಿ ಜನಿಸಿದರು. ಉಡುತಡಿ ಗ್ರಾಮವು ಶಿವಮೊಗ್ಗ ಜಿಲ್ಲೆಯಲ್ಲಿ ತುಂಗಾ ನದಿಯ ದಡದಲ್ಲಿದೆ.

**ಅಕ್ಕಮಹಾದೇವಿಯವರ ಜೀವನ:**

ಇತಿಹಾಸದಲ್ಲಿ ತಿಳಿಸಿರುವಂತೆ ಬಾಲ್ಯದಲ್ಲಿಯೂ ಸಹ ಅಕ್ಕಮಹಾದೇವಿ ಆಧ್ಯಾತ್ಮಿಕ ಒಲವಿನ ಲಕ್ಷಣಗಳನ್ನು ತೋರಿದವರು. ಈ ಕುರಿತು ಆಳವಾದ ಚಿಂತನೆ ಮತ್ತು ಧ್ಯಾನದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅವರಿಗೆ ವಯಸ್ಸಾದಂತೆ ಸಾಮಾಜಿಕ ರೂಢಿಗಳು ಮತ್ತು ಸಂಪ್ರದಾಯಗಳ ಬಗ್ಗೆ ಹೆಚ್ಚು ದೈವಿಕತೆಯೊಂದಿಗೆ ಮತ್ತಷ್ಟು ಆಳವಾದ, ಅರ್ಥಪೂರ್ಣ ಸಂಪರ್ಕಕ್ಕಾಗಿ ಹಾತೊರೆಯುತ್ತಿದ್ದ ಅವರು ತನ್ನ ಕುಟುಂಬ ಮತ್ತು ಸಮಾಜದ ನಿರ್ಬಂಧಗಳಿಂದ ಹೊರಬರಲು ಪ್ರಯತ್ನಿಸಿದರು.

ಆಧ್ಯಾತ್ಮಿಕ ಅನ್ವೇಷಣೆಯ ಉತ್ಕಟ ಬಯಕೆಯಿಂದ ಪ್ರೇರೇಪಿಸಲ್ಪಟ್ಟ ಪೂಜ್ಯರು ಚಿಕ್ಕ ವಯಸ್ಸಿನಲ್ಲಿಯೇ ತನ್ನ ಮನೆಯನ್ನು ತೊರೆದು ಸ್ವಯಂ ಅನ್ವೇಷಣೆಯ ಪ್ರಯಾಣ ಆರಂಭಿದರು. ಅವರು ಶಿವನ ಆರಾಧನೆಯನ್ನು ಒತ್ತಿಹೇಳುವ ಮತ್ತು ಜಾತಿ ವ್ಯವಸ್ಥೆಯನ್ನು ತಿರಸ್ಕರಿಸಿ ಭಕ್ತಿ ಚಳುವಳಿಯಾದ ವೀರಶೈವ ಚಳುವಳಿಗೆ ಸೇರಿ ಅಲೆದಾಡುವ ತಪಸ್ವಿಯಾದರು, ಕರ್ನಾಟಕದಾದ್ಯಂತ ಸಂಚರಿಸಿ ತನ್ನ ಪ್ರೀತಿ ಮತ್ತು ಭಕ್ತಿಯ ಸಂದೇಶವನ್ನು ಎಲ್ಲೆಡೆ ಸಾರಿದರು.

ಅಕ್ಕಮಹಾದೇವಿ ಅವರ ಜೀವನ ಮತ್ತು ಪರಂಪರೆಯು ಭಾರತ ಮತ್ತು ಅದರಾಚೆಗಿನ ಜನರನ್ನು ಪ್ರೇರೇಪಿಸಿದೆ. ಅವರು ಸಾಮಾಜಿಕ ಮಾನದಂಡಗಳನ್ನು ಧಿಕ್ಕರಿಸಿದರು ಮತ್ತು ಲಿಂಗ ಸಮಾನತೆ ಮತ್ತು ಆಧ್ಯಾತ್ಮಿಕ ವಿಮೋಚನೆಗೆ ದಾರಿ ಮಾಡಿಕೊಟ್ಟಿದೆ. ಅಕ್ಕಮಹಾದೇವಿ ಓರ್ವ ಪ್ರಸಿದ್ಧ ಕವಯತ್ರಿ ಮತ್ತು ತತ್ವಜ್ಞಾನಿಯಾಗಿದ್ದು, ಆಧ್ಯಾತ್ಮಿಕ ಸತ್ಯದ ಅನ್ವೇಷಣೆಗಾಗಿ ತನ್ನ ಜೀವನವನ್ನು ಮುಡಿಪಾಗಿಟ್ಟದ್ದರು. ಭಗವಾನ್ ಶಿವನ ಆರಾಧನೆಗೆ ಒತ್ತು ನೀಡಿ, ಜಾತಿ ವ್ಯವಸ್ಥೆಯನ್ನು ತಿರಸ್ಕರಿಸಿದ ವೀರಶೈವ ಚಳವಳಿಯ ಅನುಯಾಯಿಯಾಗಿದ್ದರು. ಚಿಕ್ಕವಯಸ್ಸಿನಲ್ಲಿಯೇ ತನ್ನ ಸಂಸಾರವನ್ನೂ, ಸಕಲ ಸಂಪತ್ತನ್ನೂ ತ್ಯಜಿಸಿ ಅಲೆದಾಡುವ ತಪಸ್ವಿಯಾಗಿ ಕರ್ನಾಟಕದಾದ್ಯಂತ ಸಂಚರಿಸಿ ತನ್ನ ತತ್ವಜ್ಞಾನವನ್ನು ಸಾರಿದರು.

ವಚನ ಶೈಲಿಯಲ್ಲಿ ಬರೆದ ಅಕ್ಕಮಹಾದೇವಿ ಅವರ ಕಾವ್ಯವು ಅದರ ಅತೀಂದ್ರಿಯ ಮತ್ತು ಭಕ್ತಿ ವಿಷಯಕ್ಕೆ ಹೆಸರುವಾಸಿಯಾಗಿದೆ. ಜೊತೆಗೆ ಸರಳ, ನೇರ ಭಾಷೆಯ ಬಳಕೆ ಸಾಮಾನ್ಯ ಜನರನ್ನು ಅನುರಣಿಸುತ್ತದೆ. ಆಕೆಯ ಕೃತಿಗಳು ಆಕೆಯ ಸ್ತ್ರೀವಾದಿ ನಂಬಿಕೆಗಳನ್ನು ಪ್ರತಿಬಿಂಬಿಸುತ್ತವೆ. ಏಕೆಂದರೆ ಅವರು ಪಿತೃಪ್ರಭುತ್ವ ಮತ್ತು ಮಹಿಳೆಯರ ದಬ್ಬಾಳಿಕೆಯ ವಿರುದ್ಧ ಆಗಾಗ್ಗೆ ಮಾತನಾಡುತ್ತಾರೆ.

ಅಕ್ಕಮಹಾದೇವಿಯು ದಾರ್ಶನಿಕಳಾಗಿದ್ದು, ತನ್ನ ಕಾಲದ



ಕಟ್ಟುಪಾಡುಗಳಿಗೆ ಸವಾಲು ಹಾಕಿ ಹೆಚ್ಚು ಒಳಗೊಳ್ಳುವ ಮತ್ತು ಸಮಾನತೆಯ ಸಮಾಜಕ್ಕೆ ದಾರಿ ಮಾಡಿಕೊಟ್ಟರು. ಅವರ ಕಾರ್ಯಗಳು ಮತ್ತು ವಚನಗಳು ಧೈರ್ಯ, ಬುದ್ಧಿವಂತಿಕೆ ಮತ್ತು ಆಧ್ಯಾತ್ಮಿಕ ಒಳನೋಟದ ನಿರಂತರ ಸಂಕೇತವಾಗಿ ಉಳಿದಿದ್ದಾರೆ.

ಅಕ್ಕಮಹಾದೇವಿಯ ಜೀವನವು ಮದುವೆಗೆ ಸಂಬಂಧಿಸಿದ ಸಾಂಪ್ರದಾಯಿಕ ಸಾಮಾಜಿಕ ರೂಢಿಗಳನ್ನು ತಿರಸ್ಕರಿಸುವ ಮೂಲಕ ಗುರುತಿಸಲ್ಪಟ್ಟಿದೆ. ಯುವತಿಯಾಗಿ ಅವರು ಕೌಶಿಕ ಎಂಬ ವ್ಯಕ್ತಿಯೊಂದಿಗೆ ನಿಶ್ಚಿತಾರ್ಥ ಮಾಡಿಕೊಂಡರು. ಆದರೆ ಅವರು ಅವನನ್ನು ಮದುವೆಯಾಗಲು ನಿರಾಕರಿಸಿದರು ಮತ್ತು ಬದಲಾಗಿ ಆಧ್ಯಾತ್ಮಿಕ ಅನ್ವೇಷಣೆಯ ಜೀವನಕ್ಕೆ ತಮ್ಮನ್ನು ಸಮರ್ಪಿಸಿಕೊಂಡರು.

ವಚನಗಳು ಎಂದು ಕರೆಯಲ್ಪಡುವ ಅಕ್ಕ ಮಹಾದೇವಿಯ ಕವನಗಳು, ದೇವರ ಮೇಲಿನ ಪ್ರೀತಿ ಮತ್ತು ಭಕ್ತಿಯ ವಿಷಯಗಳ ಮೇಲೆ ಕೇಂದ್ರೀಕರಿಸುತ್ತವೆ. ಶಿವ ದೇವರಿಗೆ ನಿರ್ದಿಷ್ಟ ಒತ್ತು ನೀಡುತ್ತವೆ. ಅವರ ಕೃತಿಗಳು ಅವರ ಸ್ಪಷ್ಟ ಮತ್ತು ನೇರ ಭಾಷೆಗೆ ಹೆಸರುವಾಸಿಯಾಗಿದೆ. ಇದು ಸಾಂಪ್ರದಾಯಿಕ ಸಾಮಾಜಿಕ ರೂಢಿಗಳು ಮತ್ತು ನಿರೀಕ್ಷೆಗಳನ್ನು ಸವಾಲು ಮಾಡುತ್ತದೆ. ಅಕ್ಕಮಹಾದೇವಿಯು ತನ್ನ ಒಂದು ವಚನದಲ್ಲಿ ಮದುವೆಯನ್ನು ಭ್ರಮೆಯ ಬಂಧವೆಂದು ವರ್ಣಿಸುತ್ತಾಳೆ. ಅದು ಮಹಿಳೆಯರನ್ನು ಜೀತ ಮತ್ತು ದಬ್ಬಾಳಿಕೆಯ ಜೀವನದಲ್ಲಿ ಸಿಲುಕಿಸಿದೆ. ಅವರು ಪಿತೃಪ್ರಭುತ್ವದ ರೂಢಿಗಳಿಂದ ಮಹಿಳೆಯರ ವಿಮೋಚನೆಗಾಗಿ ಪ್ರತಿಪಾದಿಸಿದರು ಮತ್ತು ದೈವಿಕತೆಯೊಂದಿಗೆ ಆಳವಾದ ಸಂಪರ್ಕ ಹುಡುಕುವಂತೆ ಒತ್ತಾಯಿಸಿದರು.

ಹಿಂದೂ ಸಮಾಜದಲ್ಲಿ ಮಹಿಳೆಯರಿಗೆ ವಿವಾಹವು ಅತ್ಯಗತ್ಯ ಕರ್ತವ್ಯವೆಂದು ಪರಿಗಣಿಸಲ್ಪಟ್ಟಿದ್ದ ಅಕ್ಕಮಹಾದೇವಿಯ ವಿವಾಹವನ್ನು ತ್ಯಜಿಸುವ ನಿರ್ಧಾರವು ಅವರ ಕಾಲದಲ್ಲಿ ಆಮೂಲಾಗ್ರವಾಗಿತ್ತು. ಇದನ್ನು ಸಾರಾಸಗಟಾಗಿ ತಿರಸ್ಕರಿಸುವ ಮೂಲಕ ಅವರು ಸಾಮಾಜಿಕ ವ್ಯವಸ್ಥೆಯ ಅಡಿಪಾಯಕ್ಕೆ ಸವಾಲು ಹಾಕಿದರು ಮತ್ತು ಮಹಿಳಾ ಸಬಲೀಕರಣಕ್ಕೆ ನಾಂದಿ ಹಾಡಿದರು. ಅಕ್ಕಮಹಾದೇವಿಯ ಕಾವ್ಯವು ಲೌಕಿಕ ಬಾಂಧವ್ಯಗಳನ್ನು ತಿರಸ್ಕರಿಸುವುದನ್ನು ಮತ್ತು ಆಧ್ಯಾತ್ಮಿಕ ವಿಮೋಚನೆಯತ್ತ ಅವರ ಗಮನವನ್ನು ಪ್ರತಿಬಿಂಬಿಸುತ್ತದೆ. ಮಾನವ ಅಸ್ತಿತ್ವದ ಅಂತಿಮ ಗುರಿಯಾಗಿ ದೈವಿಕತೆಯೊಂದಿಗಿನ ಒಕ್ಕೂಟದ ಅನ್ವೇಷಣೆಯನ್ನು ಅವಳು ನೋಡಿದಳು ಮತ್ತು ಮದುವೆಯನ್ನು ಈ ಗುರಿಗೆ ಅಡ್ಡಿಯಾಗಿ ನೋಡಿದಳು.

ಅಕ್ಕ ಮಹಾದೇವಿಯು ದಾರ್ಶನಿಕ ಮತ್ತು ಸಮಾಜ ಸುಧಾರಕ ಬಸವಣ್ಣನವರನ್ನು ಕಳಚುರಿಯ ರಾಜ ಬಿಜ್ಜಳನ ಆಸ್ಥಾನದಲ್ಲಿ ಭೇಟಿಯಾದರು. ಬಸವಣ್ಣನವರು ಅಕ್ಕ ಮಹಾದೇವಿಯ ದೈವಭಕ್ತಿ ಮತ್ತು ಅವರ ಕಾವ್ಯಗಳಿಂದ ಪ್ರಭಾವಿತರಾದರು. ಅಂದಿನ ಕಳಚುರಿ ರಾಜವಂಶದ ರಾಜಧಾನಿಯಾಗಿದ್ದ ಬಸವ ಕಲ್ಯಾಣ ನಗರದ ಕಲ್ಯಾಣ ಮಂಟಪದಲ್ಲಿ ಅಕ್ಕ ಮಹಾದೇವಿ ಅವರು ಸಾಕಷ್ಟು ಸಮಯ ಕಳೆದಿದ್ದಾರೆ ಎಂದು ಹೇಳಲಾಗುತ್ತದೆ. ಇಲ್ಲಿ ಅವರು 12ನೇ ಶತಮಾನದಲ್ಲಿ ಲಿಂಗಾಯತ ಚಳವಳಿಯ ಪ್ರವರ್ತಕರಲ್ಲಿ ಒಬ್ಬರೆಂದು ಪರಿಗಣಿಸಲ್ಪಟ್ಟ ತತ್ವಜ್ಞಾನಿ ಮತ್ತು ಸಮಾಜ ಸುಧಾರಕ ಬಸವಣ್ಣ ಅವರನ್ನು ಭೇಟಿಯಾದರು. ಕಲ್ಯಾಣ ಮಂಟಪವು ಬಸವಣ್ಣ ಮತ್ತು ಅವರ ಅನುಯಾಯಿಗಳನ್ನು ಭೇಟಿಯಾಗಿ ಅವರ ನಂಬಿಕೆಯ ತತ್ವಗಳನ್ನು ಚರ್ಚಿಸುವ ಸ್ಥಳವಾಗಿತ್ತು. ಅಕ್ಕಮಹಾದೇವಿ ಯವರು ಬಸವಣ್ಣನವರ ಜೊತೆ ಸಂವಾದ ನಡೆಸಿ ಅವರ ಬೋಧನೆಗಳ ಬಗ್ಗೆ ಹೆಚ್ಚು ತಿಳಿದುಕೊಳ್ಳಲು ಸಾಧ್ಯವಾದ ಸ್ಥಳವಾಗಿತ್ತು. ಬಸವಣ್ಣನವರೊಂದಿಗಿನ ಅವರ ಸಂಭಾಷಣೆಗಳು ಅವರ ಕಾವ್ಯದ ಮೇಲೆ ಹೆಚ್ಚು ಪ್ರಭಾವ ಬೀರಿದೆ ಎಂದು ಹೇಳಲಾಗುತ್ತದೆ. ಇದು ಲಿಂಗಾಯತ ಚಳವಳಿಯ ತಾತ್ವಿಕ ಮತ್ತು ಆಧ್ಯಾತ್ಮಿಕ ವಿಚಾರಗಳನ್ನು ಪ್ರತಿಬಿಂಬಿಸುತ್ತದೆ. ತನ್ನ ವಚನಗಳಲ್ಲಿ ಅಕ್ಕ ಮಹಾದೇವಿಯು ಆಗಾಗ್ಗೆ ಕಲ್ಯಾಣ ಮಂಟಪವನ್ನು ಆಧ್ಯಾತ್ಮಿಕ ಆಶ್ರಯ ಮತ್ತು ಕಲಿಕೆಯ ಸ್ಥಳವೆಂದು ಉಲ್ಲೇಖಿಸುತ್ತಾರೆ. ಅವರು ಬಸವಣ್ಣ ಮತ್ತು ಅವರ ಅನುಯಾಯಿಗಳನ್ನು ಭೇಟಿಯಾದ ಅನುಭವಗಳ ಬಗ್ಗೆ ಬರೆದಿದ್ದಾರೆ. ಅವುಗಳನ್ನು ತಮ್ಮ ಜೀವನದಲ್ಲಿ ಪರಿವರ್ತನೆಯ ಕ್ಷಣಗಳು ಎಂದು ವಿವರಿಸಿದ್ದಾರೆ.

ಕಲ್ಯಾಣ ಮಂಟಪದಲ್ಲಿ ಅಕ್ಕ ಮಹಾದೇವಿಯ ಸಮಯವು ಅವರ ಆಧ್ಯಾತ್ಮಿಕ ಮತ್ತು ತಾತ್ವಿಕ ನಂಬಿಕೆಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ ಮತ್ತು ಅವರ ಕಾವ್ಯವು ಇಂದಿಗೂ ಜನರನ್ನು ಪ್ರೇರೇಪಿಸುತ್ತಿದೆ. ಒಟ್ಟಾರೆಯಾಗಿ ಅಕ್ಕಮಹಾದೇವಿಯ ಜೀವನ ಮತ್ತು ಬೋಧನೆಗಳು ಪಿತೃಪ್ರಭುತ್ವದ ನಿಯಮಗಳ ದಿಟ್ಟ ನಿರಾಕರಣೆಯನ್ನು ಪ್ರತಿನಿಧಿಸುತ್ತವೆ ಮತ್ತು ಲಕ್ಷಾಂತರ ಜನರಿಗೆ ಆಧ್ಯಾತ್ಮಿಕ ಸ್ವಾತಂತ್ರ್ಯ ಮತ್ತು ಸಮಾನತೆಯ ಸ್ಫೂರ್ತಿ ನೀಡುತ್ತಿದೆ.

ಅಕ್ಕಮಹಾದೇವಿ ಅವರ ಸಾಹಿತ್ಯ ಕೃತಿಗಳ ಶ್ರೀಮಂತ ಪರಂಪರೆಯನ್ನು ಬಿಟ್ಟು ಹೋಗಿದ್ದಾರೆ. ಭಕ್ತಿ ಚಳವಳಿಯ ಪ್ರಸಿದ್ಧ ಕವಯತ್ರಿ ಹಾಗು ಅಪ್ರತಿಮ ಶಿವಭಕ್ತೆಯಾದ ಅಕ್ಕಮಹಾದೇವಿ ಅವರ ಅಂಕಿತನಾಮ ಚೆನ್ನಮಲ್ಲಿಕಾರ್ಜುನ. ಆಕೆಯ ಕೃತಿಗಳು ಸುಮಾರು 350 ಭಾವಗೀತೆಗಳು ಅಥವಾ ವಚನಗಳನ್ನು ಒಳಗೊಂಡಿವೆ. ವಚನ ಶೈಲಿಯಲ್ಲಿ ಬರೆದ ಅವರ ಕವನವು ಸಾಹಿತ್ಯಿಕ ಸೌಂದರ್ಯ ಮತ್ತು ಆಧ್ಯಾತ್ಮಿಕ ಆಳಕ್ಕೆ ಹೆಸರುವಾಸಿಯಾಗಿದೆ ಮತ್ತು ಶತಮಾನಗಳಿಂದ ಅಸಂಖ್ಯಾತ ಜನರನ್ನು ಪ್ರೇರೇಪಿಸಿದೆ.

ಅಕ್ಕಮಹಾದೇವಿಯ ಕಾವ್ಯವು ಶಿವನ ಮೇಲಿನ ಭಕ್ತಿ ಮತ್ತು ಆಧ್ಯಾತ್ಮಿಕ ಸತ್ಯದ ಅನ್ವೇಷಣೆಗೆ ಒತ್ತು ನೀಡುವ ಮೂಲಕ ನಿರೂಪಿಸಲ್ಪಟ್ಟಿದೆ. ಅವರು ಸರಳವಾದ, ನೇರವಾದ ಭಾಷೆಯನ್ನು ಬಳಸುತ್ತಿದ್ದರು. ಅದು ಸಾಮಾನ್ಯ ಜನರೊಂದಿಗೆ ಅನುರಣಿಸುತ್ತದೆ ಮತ್ತು ಅವರ ಕೃತಿಗಳನ್ನು ದೈವಿಕ ಸ್ತುತಿಗಾಗಿ ಹಾಡಲು ಉದ್ದೇಶಿಸಲಾದ ಭಕ್ತಿ ಸ್ತೋತ್ರಗಳ ರೂಪದಲ್ಲಿ ಬರೆಯಲಾಗಿದೆ. ಅವರ ಕಾವ್ಯದ ಜೊತೆಗೆ ಅಕ್ಕಮಹಾದೇವಿ ಅವರ ಆಧ್ಯಾತ್ಮಿಕ ನಂಬಿಕೆಗಳು ಮತ್ತು ಮಹಿಳಾ ಸಬಲೀಕರಣಕ್ಕಾಗಿ ಅವರ ಪ್ರತಿಪಾದನೆಯನ್ನು ಪ್ರತಿಬಿಂಬಿಸುವ ಹಲವಾರು ಗದ್ಯ ಕೃತಿಗಳನ್ನು ಸಹ ಬರೆದಿದ್ದಾರೆ. ಅವರ ಅತ್ಯಂತ ಪ್ರಸಿದ್ಧ ಕೃತಿಗಳಲ್ಲಿ ಒಂದಾದ ಅರ್ಧನಾರೀಶ್ವರ ಸ್ತೋತ್ರವು ದೈವಿಕತೆಯ ಪುರುಷ ಮತ್ತು ಸ್ತ್ರೀ ಅಂಶಗಳ ಏಕತೆಯನ್ನು ಆಚರಿಸುವ ಸ್ತೋತ್ರವಾಗಿದೆ. ಅಕ್ಕಮಹಾದೇವಿ ಅವರ ಕೃತಿಗಳು ಅವರ ಸ್ತ್ರೀವಾದಿ ನಂಬಿಕೆಗಳನ್ನು ಪ್ರತಿಬಿಂಬಿಸುತ್ತವೆ. ಅವರು ಆಗಾಗ್ಗೆ ಮಹಿಳೆಯರ ದಬ್ಬಾಳಿಕೆಯ ವಿರುದ್ಧ ಮಾತನಾಡುತ್ತಾರೆ ಮತ್ತು ಪಿತೃಪ್ರಭುತ್ವದ ನಿಯಮಗಳಿಂದ ವಿಮೋಚನೆಗಾಗಿ ಕರೆ ನೀಡಿದರು. ಅವರು ಆಧ್ಯಾತ್ಮಿಕ ಸಮಾನತೆಯನ್ನು ಗೌರವಿಸುವ ಮತ್ತು ಜಾತಿ ವ್ಯವಸ್ಥೆ ಮತ್ತು ಸಾಮಾಜಿಕ ಅಸಮಾನತೆಯ ಇತರ ರೂಪಗಳನ್ನು ತಿರಸ್ಕರಿಸುವ ಸಮಾಜಕ್ಕಾಗಿ ಪ್ರತಿಪಾದಿಸಿದರು.

ಅಕ್ಕ ಮಹಾದೇವಿಯು ದಾರ್ಶನಿಕ ಮತ್ತು ಸಮಾಜ ಸುಧಾರಕ ಬಸವಣ್ಣನನ್ನು ಕಳಚುರಿಯ ರಾಜ ಬಿಜ್ಜಳನ ಆಸ್ಥಾನದಲ್ಲಿ ಭೇಟಿಯಾದಳು. ಬಸವಣ್ಣನವರು ಅಕ್ಕ ಮಹಾದೇವಿಯ ದೈವಭಕ್ತಿ ಮತ್ತು ಅವರ ಕಾವ್ಯಗಳಿಂದ ಪ್ರಭಾವಿತರಾದರು. ಇಬ್ಬರೂ ನಿಕಟ ಸಂಬಂಧವನ್ನು ಬೆಳೆಸಿಕೊಂಡರು ಮತ್ತು ಆಧ್ಯಾತ್ಮಿಕ ವಿಚಾರಗಳನ್ನು ವಿನಿಮಯ ಮಾಡಿಕೊಂಡರು. ಇದು ಅಂತಿಮವಾಗಿ ಕನ್ನಡ ಭಾಷೆಯಲ್ಲಿ ಭಕ್ತಿ ಪದ್ಯಗಳ ಸಂಗ್ರಹವಾದ ವಚನ ಸಾಹಿತ್ಯದ ರಚನೆಗೆ ಕಾರಣವಾಯಿತು.

ಅಕ್ಕ ಮಹಾದೇವಿ ಮತ್ತು ಬಸವಣ್ಣನವರು ಬರೆದ ವಚನಗಳು ಲಿಂಗಾಯತ ಧಾರ್ಮಿಕ ಚಳವಳಿಯ ಅವಿಭಾಜ್ಯ ಅಂಗವಾಯಿತು ಮತ್ತು ಇಂದಿಗೂ ಪೂಜ್ಯನೀಯವಾಗಿದೆ. ಅಕ್ಕ ಮಹಾದೇವಿ ಮತ್ತು ಬಸವಣ್ಣನವರ ಭೇಟಿಯು ದಕ್ಷಿಣ ಭಾರತದಲ್ಲಿ ಭಕ್ತಿ ಚಳುವಳಿಯ ಬೆಳವಣಿಗೆಯಲ್ಲಿ ಮಹತ್ವದ ಕ್ಷಣವಾಗಿದೆ.

ಒಟ್ಟಾರೆಯಾಗಿ ಅಕ್ಕಮಹಾದೇವಿಯವರ ಸಾಹಿತ್ಯ ಕೃತಿಗಳು ಆಳವಾದ ಆಧ್ಯಾತ್ಮಿಕ ಮತ್ತು ಬೌದ್ಧಿಕ ಪರಂಪರೆಯನ್ನು ಪ್ರತಿನಿಧಿಸುತ್ತವೆ. ಅದು ಭಾರತ ಮತ್ತು ಅದರಾಚೆಗಿನ ಪೀಳಿಗೆಯ ಜನರನ್ನು ಪ್ರೇರೇಪಿಸಿದೆ. ಅವರ ಕವಿತೆ ಮತ್ತು ಗದ್ಯವನ್ನು ಅವರ ಸೌಂದರ್ಯ, ಬುದ್ಧಿವಂತಿಕೆ ಮತ್ತು ಒಳನೋಟಕ್ಕಾಗಿ ಆಚರಿಸಲಾಗುತ್ತದೆ ಮತ್ತು ಹೆಚ್ಚು ನ್ಯಾಯಯುತ ಮತ್ತು ಸಮಾನ ಸಮಾಜದ ದೃಷ್ಟಿಕೋನವು ಪ್ರಪಂಚದಾದ್ಯಂತದ ಜನರಿಗೆ ಪ್ರಬಲ ಸ್ಫೂರ್ತಿಯಾಗಿ ಉಳಿದಿದೆ.

ಅಕ್ಕಮಹಾದೇವಿಯ ಮರಣದ ನಿಖರವಾದ ದಿನಾಂಕ ಮತ್ತು ಸಂದರ್ಭಗಳು ಖಚಿತವಾಗಿ ತಿಳಿದಿಲ್ಲ. ಮೂಲಗಳ ಪ್ರಕಾರ ಅವರು 1160ರಲ್ಲಿ ದಕ್ಷಿಣ ಭಾರತದ ಇಂದಿನ ಆಂಧ್ರ ಪ್ರದೇಶದಲ್ಲಿರುವ ಶ್ರೀಶೈಲಂ ಪಟ್ಟಣದಲ್ಲಿ ಮರಣ ಹೊಂದಿದರು. ಕೇವಲ 30 ವರ್ಷ ಬದುಕಿದ್ದರು ಕೂಡ ಅಕ್ಕಮಹಾದೇವಿಯವರ ಸಾಧನೆಗಳು ಅಪಾರ. ಆಧುನಿಕ ವಿದ್ವಾಂಸರು ಸ್ತ್ರೀ ವಿಮೋಚನೆಯ ಕ್ಷೇತ್ರದಲ್ಲಿ ಅಕ್ಕಮಹಾದೇವಿಯವರನ್ನು ಪ್ರಮುಖ ವ್ಯಕ್ತಿ ಎಂದು ಪರಿಗಣಿಸಿದ್ದಾರೆ. ಶ್ರೀಶೈಲವು ಹಿಂದೂಗಳಿಗೆ ಒಂದು ಪ್ರಮುಖ ಯಾತ್ರಾ ಕೇಂದ್ರವಾಗಿದೆ. ಏಕೆಂದರೆ ಇದು ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಒಂದಾಗಿದೆ ಅಥವಾ ಭಗವಾನ್ ಶಿವನಿಗೆ ಸಮರ್ಪಿತವಾದ ಪವಿತ್ರ ದೇವಾಲಯವಾಗಿದೆ. ಅಕ್ಕಮಹಾದೇವಿ ತನ್ನ ಜೀವನದ ಕೊನೆಯ ಭಾಗವನ್ನು ಶ್ರೀಶೈಲದಲ್ಲಿ ಕಳೆದರು.

ಪ್ರಾರ್ಥನೆ ಮತ್ತು ಚಿಂತನೆಯಲ್ಲಿ ಮುಳುಗಿದರು ಮತ್ತು ಅಂತಿಮವಾಗಿ ಈ ಪವಿತ್ರ ಸ್ಥಳದಲ್ಲಿ ಮೋಕ್ಷವನ್ನು ಅಥವಾ ಜನನ ಮತ್ತು ಮರಣದ ಚಕ್ರದಿಂದ ವಿಮೋಚನೆಯನ್ನು ಪಡೆದರು ಎಂದು ಹೇಳಲಾಗುತ್ತದೆ.

ಶ್ರೀಶೈಲದಲ್ಲಿ ಅಕ್ಕಮಹಾದೇವಿಗೆ ಸಮರ್ಪಿತವಾದ ದೇಗುಲವನ್ನು ಕಾಣಬಹುದು. ಅಲ್ಲಿ ಭಕ್ತರು ಅವಳ ಸ್ಮರಣೆಗೆ ಗೌರವ ಸಲ್ಲಿಸುತ್ತಾರೆ ಮತ್ತು ಅವಳ ಆಶೀರ್ವಾದವನ್ನು ಪಡೆಯುತ್ತಾರೆ. ಅವರ ಜೀವನ ಮತ್ತು ಬೋಧನೆಗಳು ಭಾರತದಾದ್ಯಂತ ಮತ್ತು ಅದರಾಚೆಗಿನ ಲಕ್ಷಾಂತರ ಜನರಿಗೆ ಸ್ಫೂರ್ತಿ ನೀಡುವುದನ್ನು ಮುಂದುವರೆಸಿದೆ ಮತ್ತು ಆಧ್ಯಾತ್ಮಿಕ ಅನ್ವೇಷಕ, ಸ್ತ್ರೀವಾದಿ ಪ್ರತಿಮೆ ಮತ್ತು ಸಾಹಿತ್ಯಿಕ ಪ್ರತಿಭೆಯಾಗಿ ಅವರ ಪರಂಪರೆ ಇಂದಿಗೂ ಉಳಿದಿದೆ.

ಅಕ್ಕ ಮಹಾದೇವಿ ಭಕ್ತಿ ಚಳುವಳಿಯಲ್ಲಿ ಪ್ರಮುಖ ವ್ಯಕ್ತಿ ಮತ್ತು ಕನ್ನಡ ಭಾಷೆಯ ಆರಂಭಿಕ ಮಹಿಳಾ ಕವಿಗಳಲ್ಲಿ ಒಬ್ಬರು. ಸುಮಾರು 350 ವಚನಗಳು ಅಥವಾ ಭಾವಗೀತೆಗಳನ್ನು ಒಳಗೊಂಡಿರುವ ಅವರ ಕೃತಿಗಳು, ಸ್ಥಾಪಿತ ಸಾಮಾಜಿಕ ಸಂಸ್ಥೆಗಳು ಮತ್ತು ಹೆಚ್ಚಿನವುಗಳಿಗೆ ಸವಾಲು ಹಾಕುತ್ತವೆ ಮತ್ತು ಮಹಿಳೆಯರ ಇಚ್ಛೆ ಮತ್ತು ಇಚ್ಛೆಗೆ ಧ್ವನಿ ನೀಡುತ್ತವೆ. ಅಕ್ಕ ಮಹಾದೇವಿಯು ಶಿವ ದೇವರಿಗೆ ತನ್ನ ಆಳವಾದ ಭಕ್ತಿಯನ್ನು ವ್ಯಕ್ತಪಡಿಸುತ್ತಾಳೆ. ಅವರ ಕೃತಿಗಳು ವಸ್ತು ಪ್ರಪಂಚದಿಂದ ದೂರವಾಗುವುದರ ವಿಷಯಗಳು ಮತ್ತು ಮಹಿಳೆಯರಿಗೆ ಸಂಬಂಧಿಸಿದ ಸಾಮಾಜಿಕ ನಿರೀಕ್ಷೆಗಳ ಮೇಲೆ ಸ್ಪರ್ಶಿಸುತ್ತವೆ ಮತ್ತು ಮರ್ತ್ಯ ಪುರುಷರೊಂದಿಗಿನ ಸಂಬಂಧಗಳ ಅಸಮರ್ಪಕತೆಯನ್ನು ಒತ್ತಿಹೇಳುತ್ತವೆ. ಒಟ್ಟಾರೆಯಾಗಿ ಅಕ್ಕ ಮಹಾದೇವಿಯ ಪರಂಪರೆಯು ಇಂದಿಗೂ ಓದುಗರು ಮತ್ತು ವಿದ್ವಾಂಸರನ್ನು ಪ್ರೇರೇಪಿಸುತ್ತದೆ ಮತ್ತು ಪ್ರಭಾವಿಸುತ್ತಿದೆ ಹಾಗೂ ಅವರ ಕೃತಿಗಳು ಭಾರತೀಯ ಸಾಹಿತ್ಯ ಮತ್ತು ತತ್ತ್ವಶಾಸ್ತ್ರಕ್ಕೆ ಪ್ರಮುಖ ಕೊಡುಗೆಯಾಗಿ ಉಳಿದಿವೆ.

ಇಂಥ ಮಹನೀಯರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ನೆಲೆಸಿದ್ದು ಈ ಪುಣ್ಯ ಭೂಮಿಯ ನಿವಾಸಿಗಳಾದ ನಮ್ಮೆಲ್ಲರ ಭಾಗ್ಯ. ಅಕ್ಕಮಹಾದೇವಿ ಪ್ರತಿಮೆಯನ್ನು ಉಡುತಡಿಯಲ್ಲಿ ಪ್ರತಿಷ್ಠಾಪಿಸಿ ನಮ್ಮ ಮುಂದಿನ ಪೀಳಿಗೆಗೆ ಅವರ ಜೀವನ ಚರಿತ್ರೆಯ ತಿಳಿದುಕೊಳ್ಳಲು ಅವಕಾಶ ಕಲ್ಪಿಸಿರುವುದು ನಿಜಕ್ಕೂ ಶ್ಲಾಘನೀಯ. ಪ್ರತಿಯೊಬ್ಬರೂ ಪೂಜ್ಯ ಮಾತೆ ಅಕ್ಕಮಹಾದೇವಿಯ ಈ ಅಭೂತಪೂರ್ವ ಪ್ರತಿಮೆಯನ್ನು ಒಮ್ಮೆ ನೋಡಿ ಅವರ ಚರಿತ್ರೆಯನ್ನು ತಿಳಿದುಕೊಂಡರೆ ನಮ್ಮ ಮುಂದಿನ ಭವಿಷ್ಯ ಉಜ್ವಲವಾಗುವುದರಲ್ಲಿ ಸಂಶಯವಿಲ್ಲ.



ಸುನಿತಾಬಾಯಿ
ಶಿವಮೊಗ್ಗ



ದಾವಣಗೆರೆ : ಅಭಿವೃದ್ಧಿ ಸಂಸ್ಥೆ ವತಿಯಿಂದ ನಗರದ ಪೂಜಾ ಇಂಟರ್ ನ್ಯಾಷನಲ್‌ನಲ್ಲಿ ಆ.27 ರವರೆಗೆ ನಡೆಯುವ ರೇಷ್ಮೆ ಸೀರೆಗಳ ಬೃಹತ್ ಪ್ರದರ್ಶನ- ಮಾರಾಟ ಸಿಲ್ಕ್ ಇಂಡಿಯ-2023ಕ್ಕೆ ಎಸ್.ಎಸ್ ಮೆಡಿಕಲ್‌ಕಾಲೇಜಿನ ಪೆಥಾಲಜಿ ವಿಭಾಗದ ಮುಖ್ಯಸ್ಥೆ ಡಾ. ಶಶಿಕಲಾ ಕೃಷ್ಣಮೂರ್ತಿ, ಪ್ರಮುಖರಾದ ಸುಪ್ರೀತಾ ಒಡೆಯರ್, ಸೃಜನಾ ವೀರೇಂದ್ರ, ಕುಮಾರ್‌ಚಾಲನೆ ನೀಡಿದರು. 9 ದಿವಸಗಳ ಕಾಲ ನಡೆಯುವ ಈ ಮೇಳದಲ್ಲಿ ಕಾಶ್ಮೀರದಿಂದ ಕಾಂಚಿಪುರಂವರೆಗಿನರೇಷ್ಮೆ ಸೀರೆ ಉತ್ಪಾದಕರು, ರೇಷ್ಮೆ ಸೀರೆ ವಿನ್ಯಾಸಗಾರರು ಮತ್ತುರೇಷ್ಮೆ ಸಹಕಾರ ಸಂಘಗಳು 60 ಕ್ಕೂ ಹೆಚ್ಚಿನ ಮಳಿಗೆಗಳಲ್ಲಿ ತಮ್ಮರಾಜ್ಯದ ಸಾಂಪ್ರದಾಯಿಕ ರೇಷ್ಮೆ ಸೀರೆ ಮತ್ತು ಉತ್ಪನ್ನಗಳನ್ನು ದಾವಣಗೆರೆ ಜನತೆಯ ಮುಂದೆ ಪ್ರತಿ ದಿನ ಬೆಳಿಗ್ಗೆ10.30 ರಿಂದರಾತ್ರಿ 8.30 ರವರೆಗೆ ಇರುತ್ತದೆ.

# ವಿದ್ಯಾರ್ಥಿಗಳಿಗೆ ಜ್ಞಾನದ ಹಸಿವಿರಬೇಕು: ತೇಜಸ್ವಿನಾಯ್ಕ

(3ನೇ ಪುಟದಿಂದ)


ಪರಿಣಾಮ ಬೀರುತ್ತವೆ. ತಂದೆ ತಾಯಿ ಮಕ್ಕಳೊಂದಿಗೆ ಸ್ನೇಹಿತರಂತೆ ನಡೆದು ಕೊಳ್ಳಬೇಕು. ಮಕ್ಕಳನ್ನು ಪೋಷಕರು ಗಮನಿಸಬೇಕು. ಮೊಬೈಲ್ ಮತ್ತು ಟಿವಿಗಳಲ್ಲಿ ಪೋಷಕರೇ ಮುಳುಗಿ ಹೋಗಬಾರದು ಎಂದು ಸಲಹೆ ಮಾಡಿದರು.

ಮತ್ತೊಬ್ಬ ಸಂಪನ್ಮೂಲ ವ್ಯಕ್ತಿ ಹೈಕೋರ್ಟ್‌ನ ಹಿರಿಯ ನ್ಯಾಯವಾದಿ ವಸಂತ ನಾಯ್ಕ್ ಮಾತನಾಡಿ, ಮಕ್ಕಳಲ್ಲಿ ಉತ್ತಮ ಸಂಸ್ಕಾರ ಬರುವುದು ಮನೆಯಿಂದಲೇ ಆಗಿರುತ್ತದೆ. ಪೋಷಕರು ಮಕ್ಕಳೊಂದಿಗೆ ಆತ್ಮೀಯ ಸಂಬಂಧ ಹೊಂದಿರಬೇಕು. ಅವರ ಮುಂದೆ ಮದ್ಯಪಾನ, ಧೂಮಪಾನ ಮಾಡಿದರೆ ಅವರಿಗೆ ಸಂಸ್ಕಾರ ಕೊಟ್ಟಂತಾಗುವುದಿಲ್ಲ. ಆದಷ್ಟು ವೈಜ್ಞಾನಿಕ ಮನೋಭಾವಗಳಲ್ಲಿ ಅವರಲ್ಲಿ ಬಿತ್ತಬೇಕು ಎಂದು ಹೇಳಿದರು. ಹಿರಿಯ ಸಂಶೋಧಕ ಮಧುಗಣಪತಿರಾವ್ ಮಡೆನೂರು ಅವರು ತರಳೀ ಮಠದ ಐತಿಹಾಸಿಕ ಮಹತ್ವ ಕುರಿತು ಮಾಹಿತಿ ನೀಡಿದರು.

ದಿವ್ಯ ಸಾನ್ನಿಧ್ಯ ವಹಿಸಿದ್ದ ಸಾರಗನಜಡ್ಡು ಕಾರ್ತಿಕೇಯ ಕ್ಷೇತ್ರದ ಅವಧೂತರಾದ ಶ್ರೀ ಯೋಗೇಂದ್ರ ಗುರೂಜಿ ಆಶೀರ್ವಚನ ನೀಡಿ, ತಳ ಸಮುದಾಯದ ಜನ ಮೌಢ್ಯಗಳಿಂದ ದೂರವಿರಬೇಕು. ಯಾರೋ ಹೇಳಿದ ಶಾಸ್ತ್ರ ಕೇಳಿ ಇಲ್ಲದ ಆಚರಣೆ ಮಾಡಿ ಆರ್ಥಿಕ ನಷ್ಟ ಮಾಡಿಕೊಳ್ಳಬಾರದು. ಶ್ರಮವಹಿಸಿ ದುಡಿಯಬೇಕು. ಅಧ್ಯಯನ ಮಾಡಿ ವಿಚಾರಗಳನ್ನು ತಿಳಿದುಕೊಳ್ಳಬೇಕು ಎಂದು ಹೇಳಿದರು.

ಶ್ರೀ ಸಂಸ್ಥಾನ ತರಳೀಮಠದವನ್ನು ಜನರ ಮಠವಾಗಿ ಬೆಳೆಸಲು ಎಲ್ಲರ ಸಹಕಾರ ಬೇಕು. ಈ ಭಾಗದ ಧಾರ್ಮಿಕ, ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿ ಇದನ್ನು ಬೆಳೆಸುವ ಉದ್ದೇಶವನ್ನು ಹೊಂದಲಾಗಿದೆ. ಇದಕ್ಕೆ ಟ್ರಸ್ಟ್‌ನವರು ಕಂಕಣಬದ್ಧರಾಗಿ ಕೆಲಸ ಮಾಡುತ್ತಿದ್ದಾರೆ. ಸಮಾಜವನ್ನು ಕಟ್ಟಲು ಎಲ್ಲರಲ್ಲೂ ಸಮಾನ ಮನೋಭಾವ ಬೇಕು. ಮುಂದಿನ ದಿನಗಳಲ್ಲಿ ಇಲ್ಲಿ ಸಮಾಜಮುಖಿ ಕೆಲಸಗಳು ಹೆಚ್ಚಾಗಿ ನಡೆಯಲಿವೆ ಎಂದು ಯೋಗೇಂದ್ರ ಶ್ರೀ ಹೇಳಿದರು. ಪ್ರಾಧ್ಯಾಪಕ ಡಾ. ಮೋಹನ್ ಚಂದ್ರಗುತ್ತಿ, ಗುರುಮೂರ್ತಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಟ್ರಸ್ಟ್ ಅಧ್ಯಕ್ಷ ಎನ್.ಡಿ. ನಾಯ್ಕ್ ಸ್ವಾಗತಿಸಿದರು. ಕಾರ್ಯದರ್ಶಿ ಎಸ್.ಹೆಚ್. ನಾಯ್ಕ್ ವಂದಿಸಿದರು. ಮಂಜಪ್ಪ ಕಾರ್ಯಕ್ರಮ ನಿರೂಪಿಸಿದರು.



ಸ್ವಾತಂತ್ರ್ಯೋತ್ಸವ ನಿಮಿತ್ತ ಝಾನ್ಸಿ ರಾಣಿ ಲಕ್ಷ್ಮೀದೇವಿಯಾಗಿ ಪುಟಾಣಿ ಆದ್ಯ ಸಂತೋಷ್.



ಶಿಕಾರಿಪುರ ತಾಲೂಕು ಬಣಜಾರ್ ಸಮಾಜದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಗೌರವ ಅಧ್ಯಕ್ಷರಾಗಿ ತೇಜನಾಯ್ಕ ಬಿದರಕೊಪ್ಪ,ಅಧ್ಯಕ್ಷರಾಗಿ ಚುಂಚಿನಕೊಪ್ಪ ಪ್ರೇಮ್ ಕುಮಾರ್ ನಾಯ್ಕ, ಕಾರ್ಯಾಧ್ಯಕ್ಷರಾಗಿ ಬಳೂರು ನಾಗರಾಜನಾಯ್ಕ ಶಿಕ್ಷಕರು, ಪ್ರಧಾನ ಕಾರ್ಯದರ್ಶಿಯಾಗಿ ತರಲಘಟ್ಟ ಮಂಜುನಾಯ್ಕ ಕರಮತೋಟ್, ಉಪಾಧ್ಯಕ್ಷರಾಗಿ ಅಂಬಾರಗೊಪ್ಪ ರವಿ ನಾಯಕ, ನಳ್ಳಿನಕೊಪ್ಪ ಕುಮಾರ ನಾಯಕ, ಹೊಸೂರು ಚಂದ್ರು ನಾಯ್ಕ, ಸೀರಿಹಳ್ಳಿ ಹನುಮಂತ ನಾಯ್ಕ, ಅಂಜನಾಪುರ ಚಂದ್ರು ನಾಯ್ಕ ಶಿಕ್ಷಕರು, ಖಜಾಂಚಿಯಾಗಿ ಸದಾಶಿವಪುರ ಮಂಜುನಾಯ್ಕ ಸಹಿತ ಒಟ್ಟು 36 ಸದಸ್ಯರನ್ನು ಆಯ್ಕೆ ಮಾಡಲಾಯಿತು. ತಾಲೂಕಿನ ಬಣಜಾರ್ ಸಮಾಜದ ಪ್ರಮುಖರು ಸಭೆಯಲ್ಲಿ ಉಪಸ್ಥಿತರಿದ್ದರು.

# ಅರಸು ಅವರ ಜೀವನಾದರ್ಶಗಳು ಇಂದಿಗೂ ಪ್ರಸ್ತುತ

(3ನೇ ಪುಟದಿಂದ)

ತಪ್ಪಿಸಿ, ಭೂ ರಹಿತರಿಗೆ ಭೂ ಒಡೆತನದ ಹಕ್ಕನ್ನು ನೀಡುವ ಮೂಲಕ ದೇಶದಲ್ಲೇ ಮೊದಲ ಬಾರಿಗೆ ಭೂ ಸುಧಾರಣಾ ಕಾಯ್ದೆಗಳನ್ನು ಜಾರಿಗೆ ತಂದವರು ಅರಸು ರವರು. ಜೀತವಿಮುಕ್ತಿ ಕಾನೂನು ಜಾರಿಗೊಳಿಸಿದ ಅವರು ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿದ್ದರಿಂದಾಗಿ ಎಲ್ಲರೂ ಶಿಕ್ಷಣ ಪಡೆಯುವಂತೆ ಮಾಡಲು ಹಾಸ್ಟೆಲ್‌ಗಳನ್ನು ರಾಜ್ಯದಾದ್ಯಂತ ಆರಂಭಿಸಿದರೆಂದರು.

ಕಾರ್ಯಕ್ರಮದಲ್ಲಿ ಎಸ್.ಎಸ್. ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ.ಯಲ್ಲಿ ಹೆಚ್ಚಿನ ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ,ಅಡುಗೆ ಸಿಬ್ಬಂದಿಗಳಿಗೆ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಪಂ ಸಿಇಓ ಸ್ನೇಹಲ್ ಸುಧಾಕರ್ ಲೋಖಂಡೆ, ಜಿಲ್ಲಾ ರಕ್ಷಣಾಧಿಕಾರಿ ಜಿ.ಕೆ.ಮಿಥುನ್‌ಕುಮಾರ್, ಹಿಂದುಳಿದ ವರ್ಗಗಳ ವೇದಿಕೆಯ ಅಧ್ಯಕ್ಷ ವಿ.ರಾಜು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಶ್ರೀಮತಿ ಶೋಭಾ ಓಂಕಾರ್‌ನಾಯ್ಕ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೂ ಮುನ್ನ ನಗರದ ಸೈನ್ಸ್‌ಮೈದಾನದಿಂದ ಹೊರಟ ಡಿ.ದೇವರಾಜ ಅರಸು ರವರ ಭಾವಚಿತ್ರದ ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ, ಕುವೆಂಪು ರಂಗ ಮಂದಿರದಲ್ಲಿ ಸಂಪನ್ನಗೊಂಡಿತು.

# ಬಿಜೆಪಿಗೀಗ ಆಪರೇಷನ್ ಹಸ್ತ ಭೀತಿ

(ಮೊದಲ ಪುಟದಿಂದ)

ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಮಾಜಿ ಸಿಎಂಗಳಾದ ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಡಿ.ವಿ. ಸದಾನಂದ ಗೌಡ, ಮಾಜಿ ಸಚಿವರಾದ ಕಾರಜೋಳ, ಆರ್. ಅಶೋಕ್, ಕೆ.ಎಸ್. ಈಶ್ವರಪ್ಪ, ಡಾ. ಸಿ.ಎನ್. ಅಶ್ವತ್ಥ ನಾರಾಯಣ, ಶ್ರೀರಾಮುಲು, ರಾಜ್ಯ ಸಂ. ಪ್ರ. ಕಾರ್ಯದರ್ಶಿ ಜಿ.ವಿ. ರಾಜೇಶ್ ಸೇರಿ ಅನೇಕರು ಪಾಲ್ಗೊಂಡಿದ್ದರು.



ಶಬರೀಶ್ ಗುರುಸ್ವಾಮಿಯವರು ಶಬರಿಮಲೆಯಲ್ಲಿ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದ ಮೇಲ್ ಶಾಂತಿಯಾದ ಶ್ರೀ ವಿ ಜಯರಾಮನ್ ನಂಬೂದರಿಯವರನ್ನು ಭೇಟಿ ಮಾಡಿ ರೋಜಾ ಗುರೂಜಿ ಶಿಷ್ಯ ವೃಂದದಿಂದ ವಿಶೇಷವಾಗಿ ಸನ್ಮಾನಿಸಿದರು. ಶಬರೀಶ್ ಗುರುಸ್ವಾಮಿಯವರ 45ನೇ ವರ್ಷದ ಯಾತ್ರೆ ಇದಾಗಿತ್ತು. ಈ ಸಂದರ್ಭದಲ್ಲಿ ಸಂದೇಶ್ ಷಣ್ಮುಗಂ, ಹಿರಿಯ ಗುರುಸ್ವಾಮಿಯಾದ ಕೃಷ್ಣಪ್ಪ ಸ್ವಾಮಿ, ಮಣಿ ಗುರುಸ್ವಾಮಿ ಹಾಗೂ ಅನೇಕ ಹಿರಿಯರು ಉಪಸ್ಥಿತರಿದ್ದರು.

# ಅರಸು ಅವರ ಜೀವನಾದರ್ಶಗಳು ಇಂದಿಗೂ ಪ್ರಸ್ತುತ : ರುದ್ರೇಗೌಡ್ರು

## ಸಮಾನತೆ-ಸಹೋದರತೆಯ ಸಮಾಜ ನಿರ್ಮಾಣ ಅರಸು ಕನಸಾಗಿತ್ತು : ಬಿ.ಎಲ್. ರಾಜು



ಶಿವಮೊಗ್ಗ : ಧ್ವನಿಯಿಲ್ಲದ ಸಮುದಾಯಗಳಿಗೆ ಧ್ವನಿ ನೀಡಿದ ತಾತ್ವಿಕ ಮತ್ತು ಮುತ್ಸದ್ದಿ ರಾಜಕಾರಣಿ ಡಿ.ದೇವರಾಜ ಅರಸು ಅವರ ಚಿಂತನೆ, ಆಲೋಚನೆಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ವಿಧಾನ ಪರಿಷತ್ ಸದಸ್ಯ ರುದ್ರೇಗೌಡ ಅವರು ಹೇಳಿದರು.

ಜಿಲ್ಲಾಡಳಿತ, ಜಿಪಂ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ವಿವಿಧ ಸ್ಥಳೀಯ ಸಂಘ-ಸಂಸ್ಥೆಗಳ ಸಹಯೋಗದೊಂದಿಗೆ ನಗರದ ಕುವೆಂಪು ರಂಗಮಂದಿರದಲ್ಲಿ ಏರ್ಪಡಿಸಿದ್ದ ಅರಸು ಅವರ 108ನೇ ಜನ್ಮ ದಿನಾಚರಣೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸತತವಾಗಿ ಜನಹಿತಕ್ಕಾಗಿಯೇ ದುಡಿದು, ಜನಮಾನಸದಲ್ಲಿ ಇಂದಿಗೂ ಅಚ್ಚಳಿಯದೇ ಉಳಿಯುವ ವ್ಯಕ್ತಿತ್ವ ಅರಸುರವರದ್ದು. ಅರಸುರವರಿಗಿದ್ದ ಜನಪರ ಕಾಳಜಿ, ಅನುಷ್ಠಾನಕ್ಕೆ ತಂದ ಯೋಜನೆಗಳು ಜನಸಾಮಾನ್ಯರ ಬದುಕಿನ ಚಿತ್ರಣವನ್ನೇ ಶಾಶ್ವತವಾಗಿ ಬದಲಾಗಿಸಿವೆ. ಇಂತಹ ಮಹತ್ವದ ಕಾರ್ಯಕ್ರಮಗಳ ಜಾರಿಯಿಂದಾಗಿ ಅರಸುರವರು ದೇಶಕ್ಕೆ ಮಾದರಿಯಾಗಿ ನಿಲ್ಲುತ್ತಾರೆ. ಆದ್ದರಿಂದಲೇ ಅವರನ್ನು ಆದರ್ಶವಾದಿಗಳ ಸಾಲಿನಲ್ಲಿ ಮೇಲ್ಪಂಕ್ತಿಯಲ್ಲಿ ಗುರುತಿಸಲ್ಪಡುತ್ತಾರೆ ಎಂದವರು ನುಡಿದರು.

ನಿಮ್ನ ವರ್ಗದ ಜನರನ್ನು ಸಮಾಜದ ಮುಖ್ಯವಾಹಿನಿಯಲ್ಲಿ ಕರೆತರುವಲ್ಲಿ ಶ್ರಮಿಸಿದ ಅರಸುರವರು ಜಾರಿಗೊಳಿಸಿದ ಕೂಲಿಗಾಗಿ ಕಾಳು ಯೋಜನೆ ಅಸಾಧಾರಣ ಯೋಜನೆಗಳಲ್ಲೊಂದಾಗಿತ್ತು. ಅರಸುರವರು ಕೇವಲ ಮುತ್ಸದ್ದಿ ರಾಜಕಾರಣಿ ಮಾತ್ರವಾಗಿರದೇ ಅವರು ದೂರದೃಷ್ಠಿಯ ಆಲೋಚನೆ ಉಳ್ಳವರಾಗಿದ್ದರು. ಅಂದಿನ ಜನರ ಆರೋಗ್ಯ ಮತ್ತು ಶಿಕ್ಷಣಕ್ಕೆ ಒತ್ತು ನೀಡಿದ್ದರು ಎಂದರು.

ಪ್ರಾಧ್ಯಾಪಕ ಬಿ.ಎಲ್.ರಾಜು ಅವರು ಮಾತನಾಡಿ, ಮಾದರಿ ಸಮಾಜದ ನಿರ್ಮಾಣಕ್ಕೆ ಶ್ರಮಿಸಿದ ಅರಸುರವರ ಚಿಂತನೆಗಳು ಸಾರ್ವಕಾಲಿಕವಾಗಿವೆ. ಭವಿಷ್ಯದ ಬದುಕಿನ ನಿರ್ಮಾಣಕ್ಕೆ ಮಾದರಿಗಳು ಇರಬೇಕು. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್‌ರಂತೆ ಅರಸು ಅವರು ವ್ಯಕ್ತಿಗಳಾಗಿರದೇ ಆದರ್ಶ ವ್ಯಕ್ತಿಗಳಾಗಿ ಕಂಡುಬರುತ್ತಾರೆ. ಸುಂದರ ನಾಳೆಗಳ ನಿರ್ಮಾಣ ಕಾರ್ಯದಲ್ಲಿ ಇಂತಹ ಆದರ್ಶ ವ್ಯಕ್ತಿಗಳು ಮಾದರಿಯಾಗಿ ನಿಲ್ಲುತ್ತಾರೆ ಎಂದರು.

ಸಮಾನತೆ- ಸಹೋದರತೆಯ ಮೇಲೆ ಸಮಾಜ ನಿರ್ಮಿಸುವುದು ಅರಸುರವರ ಕನಸಾಗಿತ್ತು. ಭೂ ಮಾಲೀಕರ ಹಿಡಿತ(2ನೇ ಪುಟಕ್ಕೆ)

# ಕಾವೇರಿ ನದಿ ನೀರು ಹಂಚಿಕೆ ವಿವಾದ: ವಿಚಾರಣೆಗೆ ಪ್ರತ್ಯೇಕ ಪೀಠ ರಚನೆಗೆ ಸುಪ್ರೀಂ ಕೋರ್ಟ್ ಒಪ್ಪಿಗೆ

ನವದೆಹಲಿ: ಕರ್ನಾಟಕ ಮತ್ತು ತಮಿಳುನಾಡಿನ ನಡುವೆ ಮತ್ತೆ ತಿಕ್ಕಾಟಕ್ಕೆ ಕಾರಣವಾಗಿರುವ ಕಾವೇರಿ ನದಿ ನೀರು ಹಂಚಿಕೆ ವಿವಾದಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಪ್ರತ್ಯೇಕ ಪೀಠ ರಚನೆಗೆ ಸುಪ್ರೀಂ ಕೋರ್ಟ್ ಒಪ್ಪಿಗೆ ನೀಡಿದೆ.

ಕರ್ನಾಟಕಕ್ಕೆ ನೀರು ಬಿಡುವಂತೆ ಸೂಚಿಸಬೇಕು ಎಂದು ಆಗ್ರಹಿಸಿ ತಮಿಳುನಾಡು ಸಲ್ಲಿಸಿದ್ದ ಅರ್ಜಿಯ ವಿಚಾರಣೆಗಾಗಿ ಸುಪ್ರೀಂ ಕೋರ್ಟ್ ಪ್ರತ್ಯೇಕ ಪೀಠ ರಚನೆಗೆ ಒಪ್ಪಿಗೆ ನೀಡಿದೆ. ಇಂದೇ ಈ ಪೀಠ ರಚನೆಯಾಗಲಿದ್ದು, ವಿಚಾರಣೆ ಕೂಡ ಇಂದೇ ಆರಂಭ ವಾಗಲಿದೆ ಎಂದು ಹೇಳಲಾಗಿದೆ.

ಸುಪ್ರೀಂಕೋರ್ಟ್‌ನಲ್ಲಿ ಸಿಜೆಐ ಪೀಠದ ಮುಂದೆ ತಮಿಳುನಾಡು ಸರ್ಕಾರ ಅರ್ಜಿ ಸಲ್ಲಿಸಿದ್ದು, ತಮಿಳುನಾಡು ಪರ ಹಿರಿಯ ವಕೀಲ ಮುಕುಲ್ ರೋಹಟಗಿ ಅರ್ಜಿ ಪ್ರಸ್ತಾಪಿಸಿದ್ದಾರೆ. ಸುಪ್ರೀಂ ಕೋರ್ಟ್ 2023ರ ಆಗಸ್ಟ್ 14ರಿಂದ ಅನ್ವಯವಾಗುವಂತೆ ಕರ್ನಾಟಕದ ಜಲಾಶಯ ದಿಂದ 24,000 ಕ್ಯೂಸೆಕ್ಸ್ ನೀರು ಬಿಡುಗಡೆ ಮಾಡಲು ಅದಕ್ಕೆ ನಿರ್ದೇಶಿಸುವಂತೆ ಕೋರಿದ ಮನವಿಯನ್ನು ಆಲಿಕೆ ವೇಳೆ ಪ್ರಸ್ತಾವಿಸುವಂತೆ ತಮಿಳುನಾಡು ಸರಕಾರಕ್ಕೆ ಸೂಚಿಸಿತು.

ಹಿರಿಯ ವಕೀಲ ಮುಕುಲ್ ರೋಹಟಗಿ ಅವರು ಈ ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ ನೇತೃತ್ವದ ಪೀಠದ ಮುಂದೆ ಈ ಶುಕ್ರವಾರ ಪ್ರಸ್ತಾಪಿಸಿದರು.

ತಮಿಳುನಾಡು ವಾದ : ಕಾವೇರಿ ಜಲ ವಿವಾದದಲ್ಲಿ ಈ ಮನವಿಯನ್ನು ಪಟ್ಟಿ ಮಾಡುವಂತೆ ಸುಪ್ರೀಂ ಕೋರ್ಟ್ ಅನ್ನು ಆಗ್ರಹಿಸಿದ ರೋಹಟಗಿ, ತಪ್ಪಲು ಜಿಲ್ಲೆಗಳಲ್ಲಿ ಬೆಳೆದುನಿಂತ ಬೆಳೆಗಳಿಗೆ ತುರ್ತಾಗಿ ನೀರಿನ ಅಗತ್ಯತೆ ಇದೆ ಎಂದು ತಮ್ಮ ವಾದದಲ್ಲಿ ಹೇಳಿದ್ದರು. ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರ ಕರ್ನಾಟಕ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯದಿಂದ ಬಿಲ್ಲಿಗುಂಡ್ಲುವಿನಲ್ಲಿ 2023 ಆಗಸ್ಟ್ 11ರಂದು ಮುಂದಿನ 15 ದಿನಗಳಲ್ಲಿ ಬಿಡುಗಡೆ ಮಾಡಬೇಕಾಗಿದ್ದ ನೀರಿನ ಪ್ರಮಾಣ ವನ್ನು 15 ಸಾವಿರ ಕ್ಯೂಸೆಕ್ಸ್ (ಪ್ರತಿದಿನ 0.864 ಟಿಎಂಸಿ)ನಿಂದ 10 ಸಾವಿರ ಕ್ಯೂಸೆಕ್ಸ್‌ಗೆ ಇಳಿಕೆ ಮಾಡಿದೆ. ಆ ಮೂಲಕ ಅದು ಆದೇಶವನ್ನು ಉಲ್ಲಂಘಿಸಿದೆ ಎಂದು ಮನವಿಯಲ್ಲಿ ಪ್ರತಿಪಾದಿಸಲಾಗಿದೆ.

# ಅರಸು ಅವರ ಕ್ರಾಂತಿಕಾರ ಚಿಂತನೆ ಇಂದಿನ ರಾಜಕಾರಣಕ್ಕೆ ಅನುಕರಣೀಯ: ಡಿಜಿಎಸ್



ಹೊನ್ನಾಳಿ: ಅರಸು ಅವರ ಕ್ರಾಂತಿಕಾರಕ ಚಿಂತನೆ ಇಂದಿನ ರಾಜಕಾರಣಕ್ಕೆ ಅನುಕರಣೀಯವಾಗಬೇಕು ಎಂದು ಶಾಸಕ ಡಿ ಜಿ ಶಾಂತನಗೌಡ ತಿಳಿಸಿದರು.

ನಗರದ ಗುರು ಭವನದಲ್ಲಿ ತಾಲ್ಲೂಕು ಆಡಳಿತ, ತಾ.ಪಂ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಶ್ರಯದಲ್ಲಿ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ 108ನೇ ಜನ್ಮ ದಿನಾಚರಣೆಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಭೂಸುಧಾರಣೆಯಂತಹ ಕ್ರಾಂತಿಕಾರಕ ಮಸೂದೆ ಜಾರಿಗೆ ತಂದ ಶೋಷಿತವರ್ಗಗಳಿಗೆ ರಾಜಕೀಯ, ಶೈಕ್ಷಣಿಕ, ಔದ್ಯೋಗಿಕ ಸಮಾನತೆ ಕಲ್ಪಿಸಿಕೊಡುವಲ್ಲಿ ಪ್ರಮುಖಪಾತ್ರ ವಹಿಸಿದರು.

1970-80ರ ದಶಕದಲ್ಲಿ ಜೀತದಿಂದ ಶ್ರೀಮಂತರ ಜಮೀನಿನಲ್ಲಿ ಉಳುವ ಹಾಳಾಗಿದ್ದವನಿಗೆ ಉಳುವವನೇ ಒಡೆಯ ಎಂದು ಕಾನೂನನ್ನು ತಂದಂತಹ ಮಹಾನ್ ಚೇತನ ದೇವರಾಜ್ ಅರಸು ಅವರಿಗೆ ಸಲ್ಲುತ್ತದೆ ಎಂದರು.

ಸಾಮಾಜಿಕ ಸಮಾನತೆಗಾಗಿ ಹೋರಾಡಿದ ಅರಸು ಜೀತ ಪದ್ಧತಿಯಿಂದ ಮುಕ್ತಿ, ಉಳುವವನಿಗಾಗಿ ಭೂಸುಧಾರಣಾ ಕಾಯಿದೆ, 20 ಅಂಶಗಳ ಕಾರ್ಯಕ್ರಮ, ಹಾವನೂರು ವರದಿ ಜಾರಿ, ಜನತಾಮನೆ ನಿರ್ಮಾಣ, ಮತ್ತಿತರ ಸಮಾಜಮುಖಿ ಯೋಜನೆಗಳನ್ನು ಅನುಷ್ಟಾನಕ್ಕೆ ತಂದರು.

ರಾಜ್ಯದಲ್ಲಿ 2 ಬಾರಿ ಮುಖ್ಯಮಂತ್ರಿಗಳಾಗಿ ಅನೇಕ ದಿಟ್ಟ ತೀರ್ಮಾನಗಳನ್ನು ತೆಗೆದುಕೊಂಡರು. ಪ್ರಸಕ್ತ ಹಿಂದುಳಿದ ವರ್ಗಗಳ ಅಭಿವೃದ್ದಿಯಾಗುತ್ತಿದ್ದರೆ ಅದರ ಸಂಪೂರ್ಣ ಯಶಸ್ಸು ಅರಸು ಅವರಿಗೆ ಸಲ್ಲುತ್ತದೆ ಎಂದು ವಿವರಿಸಿದರು.

ಈ ಸಂದರ್ಭದಲ್ಲಿ 2022-23ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನಡೆಯಿತು.

ಕಾರ್ಯಕ್ರಮದಲ್ಲಿ ಉಪ ವಿಭಾಗಾಧಿಕಾರಿ ಹುಲ್ಲಮನಿ ತಿಮ್ಮಣ್ಣ, ತಾಲೂಕು ದಂಡಾಧಿಕಾರಿ ತಿರುಪತಿ ಪಟೇಲ್, ಬಿ .ಓ. ನಂಜರಾಜ್ ಹಾಗೂ ಈಶ್ವರಪ್ಪ, ದೇವರಾಜ್ ಅರಸು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಮೃತ್ಯುಂಜಯ ಟಿ.ಎಂ ಸೇರಿದಂತೆ ತಾಲ್ಲೂಕಿನ ಮಟ್ಟದ ಅಧಿಕಾರಗಳು ಭಾಗವಹಿಸಿದ್ದರು.

ದೇವರಾಜು ಅರಸು ಅವರ 108ನೇ ಜನ್ಮ ದಿನಾಚರಣೆಯು ಡೊಳ್ಳು ಕುಣಿತದೊಂದಿಗೆ ಮೆರವಣಿಗೆಯ ಮೂಲಕ ತಾಲೂಕು ಸೌತದಿಂದ ಗುರುಭವನಕ್ಕೆ ತಲುಪಿತು.

ನಿಲಯ ಮೇಲ್ವಿಚಾರಕರಾದ ಕುಮಾರ್ ಬಾರ್ಕಿ ನಿರೂಪಿಸಿ, ರೂಪ. ಕೆ. ನ್ ವಂದಿಸಿದರು.

# ಸಾಮಾಜಿಕ ಸಾಮರಸ್ಯಕ್ಕಾಗಿ ನಿವಾಸಿಗಳ ಸಂಘಗಳು ಅಗತ್ಯ : ಪ್ರಕಾಶ್



ಶಿವಮೊಗ್ಗ: ನಗರವು ವಿಸ್ತಾರವಾಗಿ ಬೆಳೆಯುತ್ತಿರುವುದರಿಂದ ಹೊಸ- ಹೊಸ ಲೇಔಟ್‌ಗಳ ನಿರ್ಮಾಣ ಸಂಖ್ಯೆ ಹೆಚ್ಚುತ್ತಿದೆ. ಇಂತಹ ಹೊಸ ಹಾಗೂ ಹಳೆಯ ಬಡಾವಣೆಗಳಲ್ಲಿ ಮೂಲ ಸೌಕರ್ಯದ ಕೊರತೆ ಸಹ ಇದೆ. ಬಡಾವಣೆಗಳಲ್ಲಿನ ಕುಂದು ಕೊರತೆಗಳ ನಿವಾರಣೆ, ಸಾಮಾಜಿಕ ಸಾಮರಸ್ಯ, ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಅಗತ್ಯ ಎಂದು ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ಸಮಿತಿಯ ಧರ್ಮದರ್ಶಿ ಜೋಡಿಯಾಕ್ ಪ್ರಕಾಶ್ ಹೇಳಿದರು.

ಗುಂಡಪ್ಪ ಶೆಡ್ ಮಲ್ಲೇಶ್ವರ ನಗರ ಹಾಗೂ ರಾವ್‌ರಾವ್ ಬಡಾವಣೆಯ ನಿವಾಸಿಗಳ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಹಿನ್ನಲೆಯಲ್ಲಿ ಕೋಟೆ ರಸ್ತೆಯ ಜೋಡಿಯಾಕ್ ಮೆನ್ಸ್‌ವೇರ್‌ನಲ್ಲಿ ಇತ್ತೀಚೆಗೆ ಹಮ್ಮಿಕೊಳ್ಳಲಾಗಿದ್ದ ಅಭಿನಂದನಾ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.

ಬಡಾವಣೆ ನಿವಾಸಿಗಳ ಮೂಲ ಭೂತ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ನಿಟ್ಟಿನಲ್ಲಿ ಸ್ಥಳೀಯ ಆಡಳಿತ ಸಂಸ್ಥೆಯ ಗಮನ ಸೆಳೆಯಲು ಸಂಘಟಿತ ಪ್ರಯತ್ನ ಅಗತ್ಯ. ಮಾಜಿ ಡಿಸಿಎಂ ಕೆ.ಎಸ್. ಈಶ್ವರಪ್ಪನವರು ನಮ್ಮ ಬಡಾವಣೆಯ ನಿವಾಸಿ ಎಂಬುವುದು ನಮ್ಮ ಹೆಮ್ಮೆ. ಅಲ್ಲದೆ ಅವರು ಅಧಿಕಾರದಲ್ಲಿದ್ದಾಗ ಬಡಾವಣೆಯನ್ನು ಸುಸಜ್ಜಿತವಾಗಿ ಅಭಿವೃದ್ಧಿ ಪಡಿಸಲು ಅಗತ್ಯ ಕ್ರಮ ಕೈಗೊಂಡಿದ್ದರೆಂದರು.

ಸುಮಾರು 25 ವರ್ಷಗಳಿಂದ ಸಂಘವು ಸಕ್ರಿಯವಾಗಿ ಅಸ್ತಿತ್ವದಲ್ಲಿದೆ. ಕಲೆ, ಸಾಹಿತ್ಯ, ಕ್ರೀಡೆ, ಸಾಂಸ್ಕೃತಿಕ, ಧಾರ್ಮಿಕ ಚಟುವಟಿಕೆಗಳ ಆಯೋಜನೆ, ಸನಾತನ ಧರ್ಮದ ಸಂಸ್ಕೃತಿ, ಪರಂಪರೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಸಂಘವು ಕಾರ್ಯೋನ್ಮುಖವಾಗಿದೆ. ಇದನ್ನು ಮತ್ತಷ್ಟು ಹೆಚ್ಚಿಸಿಕೊಂಡು ಹೋಗಲು ಮಾಜಿ ಸಚಿವರಾದ ಕೆ.ಎಸ್. ಈಶ್ವರಪ್ಪ, ಶಾಸಕ ಎಸ್.ಎನ್. ಚನ್ನಬಸಪ್ಪ, ಮತ್ತಿತರೆ ಜನಪ್ರತಿನಿಧಿಗಳು, ಪ್ರಮುಖರು ಅಗತ್ಯ ಸಹಕಾರ ಮತ್ತು ಮಾರ್ಗದರ್ಶನ ನೀಡಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ತಾನು ವಿವಿಧ ಪರಿಸರ ಪರ ಸಂಘಟನೆಗಳಲ್ಲಿ ಸಕ್ರಿಯನಾಗಿದ್ದು, ಕೇವಲ ತಮ್ಮ ಬಡಾವಣೆ ಅಷ್ಟೇ ಅಲ್ಲ, ಇಡೀ ನಗರವನ್ನು ಹಸಿರೀಕರಣಗೊಳಿಸುವ ನಿಟ್ಟಿನಲ್ಲಿ ಶ್ರಮಿಸಲಾಗುತ್ತಿದೆ. ಮಾಧ್ಯಮಗಳು ಸಹ ಪರಿಸರ ಪರ ಚಟುವಟಿಕೆಗಳನ್ನು ಪ್ರೋತ್ಸಾಹಿಸಿ ಪರಿಸರ ಸಂರಕ್ಷಣೆಯಲ್ಲಿ ಪ್ರಜಾಪ್ರಭುತ್ವದ ನಾಲ್ಕನೇ ಅಂಗವೆಂದೇ ಪರಿಗಣಿತವಾಗಿರುವ ಮಾಧ್ಯಮಗಳ ಪಾತ್ರ ಮಹತ್ವದ್ದಾಗಿದೆ ಎಂದು ಹೇಳಿದರು.

ಸಂಘದ ಗೌರವಾಧ್ಯಕ್ಷ ಅಚ್ಯುತ್ ರಾವ್, ಉಪಾಧ್ಯಕ್ಷ ಗಣೇಶಣ್ಣ, ಕಾರ್ಯದರ್ಶಿ ಶಿವಾನಂದ್, ಸಹ ಕಾರ್ಯದರ್ಶಿ ಜೀವನ್ ಕುಮಾರ್, ಖಜಾಂಚಿ ಮೋಹನ್ ಮತ್ತಿತರೆ ಪದಾಧಿಕಾರಿಗಳು, ಬಡಾವಣೆ ನಿವಾಸಿಗಳ ಸಂಘದ ಸಲಹೆ, ಸಹಕಾರದ ಮೂಲಕ ಈ ಬಡಾವಣೆಯನ್ನು ನಗರದ ಮಾದರಿ ಬಡಾವಣೆಯಾಗಿ ರೂಪಿಸಲಾಗುವುದು ಎಂದರು.

ತಾಪಂ ಮಾಜಿ ಸದಸ್ಯ ಶ್ರೀಧರ್, ಪುರುಷೋತ್ತಮ್, ಸುಧೀಂದ್ರ, ಮಾರುತಿ, ಪರಿಸರ ಮಂಜುನಾಥ್, ರಾಘವೇಂದ್ರ, ಸಂಜಯ್ ಮತ್ತಿತರರು ಉಪಸ್ಥಿತರಿದ್ದರು.



ನಂದವಾಡ: ಆ.19ರ ಶನಿವಾರದಂದು ಸ ಹೆ ಮ ಹಿ ಪ್ರಾ ಶಾಲೆ ನಂದವಾಡಗಿಯಲ್ಲಿ ಶನಿವಾರ ಸಂಭ್ರಮ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತು. 1ರಿಂದ 3, 4 ಮತ್ತು 5ಹಾಗೂ 6ರಿಂದ 7ನೇ ತರಗತಿವರೆಗೆ ವಿಭಾಗ ಮಾಡಿ ಲಿಂಗ ಸಮಾನತೆ ಹಾಗೂ ಲಿಂಗತ್ವದ ಅರಿವು ಮೂಡಿಸಿ ಚಟುವಟಿಕೆ ನೀಡಲಾಯಿತು. ಕಾರ್ಯಕ್ರಮದಲ್ಲಿ ಶಾಲೆಯ ಪ್ರಭಾರಿ ಮುಖ್ಯ ಶಿಕ್ಷಕಿ ವಿ ಬಿ ಕುಂಬಾರ, ಶ್ರೀಮತಿ ಜ್ಯೋತಿ, ಜಿ ಆರ್ ನದಾಫ್, ಬಸವರಾಜ ಬಲಕುಂದಿ, ಡಾ। ವಿಶ್ವನಾಥ ತೋಟಿ ಹಾಗೂ ವಿದ್ಯಾರ್ಥಿನಿಯರು ಹಾಜರಿದ್ದರು.

# ತರಳೀಮಠದಲ್ಲಿ ಮೌಲ್ಯಾಧರಿತ ಶಿಕ್ಷಣ ಕುರಿತ ವಿಚಾರಸಂಕಿರಣ

## ವಿದ್ಯಾರ್ಥಿಗಳಿಗೆ ಜ್ಞಾನದ ಹಸಿವಿರಬೇಕು: ತೇಜಸ್ವಿನಾಯ್ಕ



ಸಿದ್ದಾಪುರ (ಉ.ಕ): ವಿದ್ಯಾರ್ಥಿಗಳಿಗೆ ಜ್ಞಾನದ ಹಸಿವು ಇದ್ದಾಗ ಮಾತ್ರ ಅವರ ಅರಿವಿನ ಪರಿಧಿ ವಿಸ್ತಾರವಾಗುತ್ತದೆ. ಹೆಚ್ಚು ಓದಬೇಕು. ಇತಿಹಾಸವನ್ನು ಅಧ್ಯಯನ ಮಾಡಬೇಕು ಎಂದು ಕೇಂದ್ರ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ ತೇಜಸ್ವಿ ನಾಯ್ಕ ಹೇಳಿದರು.

ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ತಾಲೂಕಿನ ಶ್ರೀ ಸಂಸ್ಥಾನ ತರಳೀ ಮಠದಲ್ಲಿ ನಡೆದ ಮೌಲ್ಯಾಧರಿತ ಶಿಕ್ಷಣದಲ್ಲಿ ವಿದ್ಯಾರ್ಥಿಗಳು ಮತ್ತು ಪೋಷಕರ ಜವಾಬ್ದಾರಿ ಕುರಿತ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಓದು ಮತ್ತು ಸಂಶೋಧನೆಯ ಬೆನ್ನು ಹತ್ತಿದವರು ಸಮಾಜಕ್ಕೆ ಏನಾದರೂ ಕೊಡುಗೆ ನೀಡುತ್ತಾರೆ. ಪ್ರಸ್ತುತ ದಿನಮಾನಗಳಲ್ಲಿ ಮೊಬೈಲ್ ಒಂದು ದೊಡ್ಡ ಚಾಲೆಂಜ್ ಆಗಿದೆ. ಮಕ್ಕಳು ಮೊಬೈಲ್‌ನಲ್ಲಿ ಯಾವ ಸಂಗತಿಯ ಬಗ್ಗೆ ಕೇಂದ್ರೀಕರಿಸುತ್ತಾರೆ ಮತ್ತು ಏನಕ್ಕೆ ಅಡಿಕ್ಟ್ ಆಗಿದ್ದಾರೆ ಎಂಬುದನ್ನು ಪೋಷಕರು ಗಮನಿಸಬೇಕೆಂದರು. ಯಾರು ಕಷ್ಟ ಪಟ್ಟು ಅಧ್ಯಯಶೀಲರಾಗುತ್ತಾರೊ ಅವರಿಗೆ ಯಶಸ್ಸು ಸಿಗುತ್ತದೆ ಎಂದು ಹೇಳಿದರು.

ಅರುಣಾಚಲ ಪ್ರದೇಶದಲ್ಲಿ ಅರಣ್ಯ ಸಂರಕ್ಷಣಾಧಿಕಾರಿಯಾಗಿರುವ ದಾಮೋಧರ್ ಎ.ಟಿ. ಅವರು ಮುಖ್ಯ ಅತಿಥಿಯಾಗಿ ಮಾತನಾಡಿ, ವಿಶಿಷ್ಟ ಪರಂಪರೆಯನ್ನು ಹೊಂದಿರುವ ನಮ್ಮ ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ವ್ಯಕ್ತಿತ್ವ ರೂಪಿಸುವ ಬದಲು ಅಂಕಗಳ ಹಿಂದೆ ಹೋಗುವ ಪರಿಪಾಠವಿದೆ. ಆದರೆ ಉತ್ತಮ ವ್ಯಕ್ತಿತ್ವ ರೂಪಿಸುವ ಮೂಲಕ ಸಮಾಜಕ್ಕೆ ಉತ್ತಮ ನಾಗರೀಕರನ್ನು ಕೊಡುವತ್ತ ಚಿತ್ತ ಹರಿಸಬೇಕಿದೆ. ಪ್ರತಿಯೊಬ್ಬರಲ್ಲೂ ಒಂದು ಶಕ್ತಿ ಇದೆ. ಅದನ್ನು ಸರಿಯಾಗಿ ಬಳಕೆ ಮಾಡಿಕೊಳ್ಳುವ ಮಾರ್ಗವನ್ನು ಪೋಷಕರು ಮತ್ತು ವಿದ್ಯಾರ್ಥಿಗಳು ಕಂಡುಕೊಳ್ಳಬೇಕಿದೆ. ಸಮಾಜದಲ್ಲಿ ಸ್ಥಾನಮಾನ ಪಡೆದ ವ್ಯಕ್ತಿಗಳು ಸಮಾಜಮುಖಿ ಕೆಲಸ ಮಾಡಬೇಕೆಂದು ಹೇಳಿದರು.

ಸಂಪನ್ಮೂಲ ವ್ಯಕ್ತಿಯಾಗಿದ್ದ ಕು.ಪೋಷಿಣಿ ಅವರು ಮಾತನಾಡಿ, ವಿದ್ಯಾರ್ಥಿಗಳ ವ್ಯಕ್ತಿತ್ವ ಮನೆಯಿಂದಲೇ ರೂಪುಗೊಳ್ಳುತ್ತದೆ. ಪೋಷಕರು ನಡೆದುಕೊಳ್ಳುವ ರೀತಿ, ಬೆಳೆಸಿಕೊಂಡ ಅಭ್ಯಾಸಗಳು ಮಕ್ಕಳ ಮೇಲೆ ಗಾಢವಾದ(2ನೇ ಪುಟಕ್ಕೆ)

# ಕಲಿಕೆ ಸಂತೋಷದಾಯಕವಾಗಲು ನೋ ಬ್ಯಾಗ ಡೇ ಅತ್ಯವಶ್ಯ : ಕಬ್ಬೂರ



ಸವದತ್ತಿ : ಮಕ್ಕಳ ಶಾಲೆಯಲ್ಲಿನ ಕಲಿಕೆ ಸಂತೋಷದಾಯಕವಾಗಿರಬೇಕು ಮತ್ತು ಆನಂದದಾಯಕವಾಗಿರಬೇಕು ಹಾಗೂ ಬ್ಯಾಗಿನ ಹೊರೆನ್ನು ಕಡಿಮೆ ಮಾಡಿ ಮಕ್ಕಳಲ್ಲಿ ಅಡಗಿರುವ ಸೂಕ್ತ ಪ್ರತಿಭೆ, ಕೌಶಲಗಳು ಹಾಗೂ ಮೌಲ್ಯಗಳು ಅನಾವರಣಗೊಳ್ಳಬೇಕು ಎಂಬ ಉದ್ದೇಶದಿಂದ ಸಂಭ್ರಮ ಶನಿವಾರ ಕಾರ್ಯಕ್ರಮ ಆಚರಿಸಲಾಗುತ್ತಿದೆ ಎಂದು ಶಿಕ್ಷಕ ಎನ್.ಎನ್.ಕಬ್ಬೂರ ಅಭಿಪ್ರಾಯ ಹಂಚಿಕೊಂಡರು.

ಪಟ್ಟಣದ ಸ.ಕಿ.ಪ್ರಾ, ಕನ್ನಡ ಶಾಲೆ ನಂ-6ರಲ್ಲಿ ನಡೆದ ಸಂಭ್ರಮ ಶನಿವಾರದ ನೋ ಬ್ಯಾಗ್ ಡೇ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿಶೇಷ ಚೇತನ ಮಕ್ಕಳ ಜೊತೆಗಿನ ಸಂವಹನ ಎಂಬ ವಿಷಯದ ಕುರಿತಾದ ಚಟುವಟಿಕೆಯಲ್ಲಿ ಅಂಧ ಮತ್ತು ದೃಷ್ಠಿದೋಷ ಮಕ್ಕಳು ಎದುರಿಸುವ ಕೆಲವು ಸಮಸ್ಯೆಗಳನ್ನು ಮಕ್ಕಳೊಂದಿಗೆ ಚರ್ಚೆ ಮಾಡಿದರು. ನಂತರ ಸಂಬಂಧಿಸಿದ ಹಲವಾರು ಚಟುವಟಿಕೆಗಳನ್ನು ಮಕ್ಕಳಿಂದ ಮಾಡಿಸಲಾಯಿತು.

ಮಕ್ಕಳ ಕಲಿಕೆಯು ಯಶಸ್ವಿಯಾಗಬೇಕಾದರೆ ಸಂಭ್ರಮ ಶನಿವಾರದ ಮಹತ್ವವನ್ನು ಪಾಲಕ-ಪೋಷಕರು ಮತ್ತು ಸಮುದಾಯದವರು ಅರ್ಥ ಮಾಡಿಕೊಂಡು ಮಗುವಿನ ಮೂಲಭೂತ ಹಕ್ಕಾದ ಶಿಕ್ಷಣವನ್ನು ಕೊಡಿಸುವಲ್ಲಿ ಶ್ರಮಿಸಬೇಕು ಎಂದು ಚರ್ಚಿಸಲಾಯಿತು.

ಈ ಸಂದರ್ಭದಲ್ಲಿ ಶಿಕ್ಷಕಿಯರು, ಅಂಗನವಾಡಿ ಕಾರ್ಯಕರ್ತೆಯರು, ಅಡುಗೆ ಸಿಬ್ಬಂದಿಯವರು, ಪಾಲಕ-ಪೋಷಕರು ಮತ್ತು ಮಕ್ಕಳು ಹಾಜರಿದ್ದರು.

## ಉತ್ತರಾದಿ ಮಠಾಧೀಶರಾದ ಶ್ರೀ ಸತ್ಯಾತ್ಮ ತೀರ್ಥ ಶ್ರೀಪಾದರ ಎಚ್ಚರಿಕೆ

# ಹಿಂಸೆ ಆನಂದವಾದರೆ, ದುಃಖದ ಪ್ರತಿಫಲ ಖಚಿತ



ಹೊಳೆಹೊನ್ನೂರು : ದೇವರಲ್ಲಿರುವ ಗುಣ ನಮ್ಮಲ್ಲಿ ಇದೆ ಎಂದು ತಿಳಿದುಕೊಂಡರೆ ಅದು ದೊಡ್ಡ ತಪ್ಪುತಿಳುವಳಿಕೆ. ಹಾಗೆ ತಿಳಿದರೆ ನಾನು ದೇವರು ಎಂದು ತಿಳಿದುಕೊಂಡಂತೆ ಎಂದು ಉತ್ತರಾದಿ ಮಠಾಧೀಶರಾದ ಶ್ರೀ ಸತ್ಯಾತ್ಮ ತೀರ್ಥ ಶ್ರೀಪಾದರು ಹೇಳಿದರು.

ತಮ್ಮ 28ನೇ ಚಾತುರ್ಮಾಸ್ಯ ನಿಮಿತ್ತ ನಡೆಯುತ್ತಿರುವ ಶ್ರೀ ಸತ್ಯಧರ್ಮತೀರ್ಥ ಶ್ರೀಪಾದಂಗಳವರ ದಶಮ ಸ್ಕಂದ ವ್ಯಾಖ್ಯಾನಾಧಾರಿತ ಅನುಗ್ರಹ ಸಂದೇಶ ನೀಡಿದರು.

ಯಾವ ಕಾರ್ಯ ಮಾಡಿದರೂ ನಾನು ಮಾಡಿದ್ದು ಎಂದು ಹೇಳುತ್ತೇವೆ. ಇದೇ ದೊಡ್ಡ ತಪ್ಪು ತಿಳುವಳಿಕೆ. ಈ ಸ್ವಾತಂತ್ರ್ಯ ಇರುವುದು ದೇವರಿಗೆ ಮಾತ್ರ. ಈ ತಪ್ಪಿನಿಂದಾಗಿ ಸಂಸಾರದ ದುಃಖ ಅನುಭವಿಸುತ್ತಿದ್ದೇವೆ ಎಂದರು.

**ಹಿಂಸೆ ಮಾಡಬೇಡಿ :**

ಇನ್ನೊಬ್ಬರಿಗೆ ಹಿಂಸೆ ಮಾಡುವಾಗ ಆನಂದವಾಗುತ್ತದೆ. ಆದರೆ ಮುಂದೆ ಅದರ ಪ್ರತಿಫಲವನ್ನು ಅನುಭವಿಸುವಾಗ ಸಹಿಸಲು ಆಗುವುದಿಲ್ಲ. ಅಂತಹ ಉಗ್ರವಾದ ಶಿಕ್ಷೆಯನ್ನು ದೇವರು ಕೊಡುತ್ತಾನೆ. ಹೀಗಾಗಿ ಈ ಲೋಕದಲ್ಲಿ ಮಾಡಿದ ಪುಣ್ಯ ಮತ್ತು ಪಾಪಗಳ ಫಲವನ್ನು ಇನ್ನೊಂದು ಲೋಕದಲ್ಲಿ ಅನುಭವಿಸಬೇಕಾಗುತ್ತದೆ ಎಂಬ ಎಚ್ಚರ ನಮಗೆ ಇರಬೇಕು ಎಂದರು.

**ಅತಿಯಾದ ಹಣದಿಂದ ಅನರ್ಥ :**

ನಂತರ ನಡೆದ ವಿದ್ವತ್ ಸಭೆಯಲ್ಲಿ ಪ್ರವಚನ ನೀಡಿದ ಪಂಡಿತ ಸಂದೇಶಾಚಾರ್ಯ ಝುಲ್ಕೀಕರ್, ಕಾಮ, ಕ್ರೋಧ, ಮದ, ಮತ್ಸರ ಇವೆಲ್ಲವೂ ಅತಿಯಾದ ಹಣದಿಂದ ಬರುತ್ತದೆ. ಇದರಿಂದ ಹಲವು ಅನರ್ಥಕ್ಕೆ ಕಾರಣವಾಗುತ್ತದೆ. ಹೀಗಾಗಿ ಶ್ರೇಯಾಕಾಂಕ್ಷಿಗಳು ಹೆಚ್ಚಿನ ಹಣವನ್ನು ಅಪೇಕ್ಷೆ ಪಡಬಾರದು. ಇರುವ ಹಣದಲ್ಲಿಯೇ ಸುಖ ಪಡಬೇಕು. ಧರ್ಮ ಮಾರ್ಗದಲ್ಲಿ ಪುಣ್ಯ ಕರ್ಮಗಳಿಗೆ ವಿನಿಯೋಗಿಸಬೇಕು ಎಂದರು.

ಸತ್ಯವನ್ನೇ ಮಾತನಾಡಬೇಕು. ಇನ್ನೊಬ್ಬರಿಗೆ ಅಹಿತವಾಗಿ ಮಾತನಾಡಬಾರದು. ಹೀಗೆ ನಾವು ಮಾತನಾಡುವುದು ಕೂಡ ಒಂದು ರೀತಿಯ ತಪಸ್ಸು ಎನಿಸುತ್ತದೆ. ನಮ್ಮ ಮಾತುಗಳು ಇತರರಿಗೆ ನೋವು ತರಬಾರದು ಎಂದರು.

ಈ ವೇಳೆ ಬೆಂಗಳೂರಿನ ಜಯತೀರ್ಥ ವಿದ್ಯಾಪೀಠದ ಕುಲಪತಿಗಳಾದ ಗುತ್ತಲ ರಂಗಾಚಾರ್ಯ, ಪಂಡಿತರಾದ ಲಕ್ಷ್ಮೀ ನರಸಿಂಹಾಚಾರ್ಯ, ಶ್ರೀಕಾಂತಾಚಾರ್ಯ ಮುಕ್ಕುಂದಿ, ಕಡೂರು ಮಧುಸೂಧನಾಚಾರ್ಯ, ಚಾತುರ್ಮಾಸ್ಯ ಸಮಿತಿಯ ಅಧ್ಯಕ್ಷ ನವರತ್ನ ಸುಬ್ಬಣ್ಣಾಚಾರ್ಯ, ಪಂಡಿತರಾದ ನವರತ್ನ ಶ್ರೀನಿವಾಚಾರ್ಯ, ನವರತ್ನ ಪುರುಷೋತ್ತಮಾಚಾರ್ಯ, ರಘೂತ್ತಮಾಚಾರ್ಯ ಸಂಡೂರು, ಜಿಲ್ಲಾ ಮಠಾಧಿಕಾರಿ ಬಾಳಗಾರು ಜಯತೀರ್ಥಾಚಾರ್ಯ ಮೊದಲಾದವರಿದ್ದರು.

### ಮದ್ರಾಸ್ ಐ ಇರುವವರು ಬರಬೇಡಿ...

ಶ್ರೀ ಸತ್ಯಾತ್ಮ ತೀರ್ಥ ಶ್ರೀಪಾದಂಗಳವರ ಚಾತುರ್ಮಾಸ್ಯ ಕಾರ್ಯಕ್ರಮಕ್ಕೆ ಸಾಂಕ್ರಾಮಿಕ ಕಾಯಿಲೆ ಇರುವವರು ಕಡ್ಡಾಯವಾಗಿ ಬರಬಾರದು ಎಂದು ಉತ್ತರಾದಿ ಮಠದ ಪ್ರಕಟಣೆ ಮನವಿ ಮಾಡಿದೆ. ಇತ್ತೀಚೆಗೆ ಮದ್ರಾಸ್ ಐ ಕಾಯಿಲೆ ಕೆಲವೆಡೆ ಹರಡುತ್ತಿದೆ. ಹೀಗಾಗಿ ಈ ರೀತಿಯ ಲಕ್ಷಣ ಹೊಂದಿದವರು ಅಥವಾ ಇನ್ನಾವುದೇ ಸಾಂಕ್ರಾಮಿಕ ಕಾಯಿಲೆ ಇರುವವರು ಗುಣ ಆಗುವವರೆಗೆ ಚಾತುರ್ಮಾಸ್ಯಕ್ಕೆ ಆಗಮಿಸಬಾರದು. ಇದರಿಂದ ಇತರರಿಗೆ ಅನಾನುಕೂಲ ಆಗಲಿದೆ. ಹೀಗಾಗಿ ಕಾಯಿಲೆಯಿಂದ ಗುಣವಾದ ಬಳಿಕ ಬರಬಹುದು ಎಂದು ತಿಳಿಸಲಾಗಿದೆ.

# ಶಿವಮೊಗ್ಗ ಸ್ಮಾರ್ಟ್ ಸಿಟಿ ಕಾಮಗಾರಿಗಳ ಜಂಟಿ ಪರಿವೀಕ್ಷಣೆ
# ಸಮಸ್ಯೆಗಳಿದ್ದಲ್ಲಿ ದೂರು ನೀಡಿ ಸಹಕರಿಸಲು ಮನವಿ

ಶಿವಮೊಗ್ಗ : ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್‌ನಿಂದ ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ಪ್ಯಾಕೇಜ್ ಗಳಲ್ಲಿ ಆಯ್ದ ವಾರ್ಡ್‌ಗಳಲ್ಲಿ ರಸ್ತೆ, ಚರಂಡಿ, ಫುಟ್‌ಪಾತ್, ಪಾರ್ಕ್, ಬಸ್ ಶೆಲ್ಟರ್, ಕನ್ಸರ್‌ವೆನ್ಸಿ, ಸರ್ಕಲ್ ಅಭಿವೃದ್ಧಿ, ಶೌಚಾಲಯ ಇತ್ಯಾದಿ ಗಳ ನಿರ್ಮಾಣ ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನ ಗೊಳಿಸಲಾಗಿದ್ದು, ಈ ಎಲ್ಲಾ ನಿರ್ಮಾಣ ಕಾಮಗಾರಿಗಳನ್ನು ಹಸ್ತಾಂತರಿಸಲು ಶಿವಮೊಗ್ಗ ಮಹಾನಗರ ಪಾಲಿಕೆಯು ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಜನ ಪ್ರತಿನಿಧಿಗಳ ಜೊತೆ ಜಂಟಿ ಪರಿವೀಕ್ಷಣೆಯನ್ನು ನಡೆಸಿ, ನ್ಯೂನ್ಯತೆ ಇದ್ದಲ್ಲಿ ಸರಿಪಡಿಸಿಕೊಂಡು ಹಸ್ತಾಂತರಿಸಿಕೊಳ್ಳಲು ನಿರ್ಣಯಿಸಿದೆ.

ಪ್ರಾಥಮಿಕ ಹಂತವಾಗಿ ಶಿವಮೊಗ್ಗ ಸ್ಮಾರ್ಟ್‌ಸಿಟಿ ಲಿ., ವತಿಯಿಂದ ಅಳವಡಿಸಲಾಗಿರುವ ಭೂಗತ ಕೇಬಲ್, ಬೀದಿ ದೀಪದ ಕಂಬಗಳ ಸಂಬಂಧ ಮೆಸ್ಕಾಂ, ಶಿವಮೊಗ್ಗ ಮಹಾನಗರ ಪಾಲಿಕೆ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಇತರೆ ಸಂಬಂಧಿತ ಇಲಾಖೆಗಳ ಅಧಿಕಾರಿಗಳು, ವಾರ್ಡ್ ಸದಸ್ಯರುಗಳು, ಸಾರ್ವಜನಿಕರು, ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಗುತ್ತಿಗೆದಾರರ ಸಮ್ಮುಖದಲ್ಲಿ ಆ. 22ರಿಂದ 25 ರವರೆಗೆ ಬೆಳಗ್ಗೆ 10 ರಿಂದ ಮಧ್ಯಾಹ್ನ 12ರವರೆಗೆ ಜಂಟಿ ಸ್ಥಳ ಪರಿಶೀಲನೆ, ಸಮೀಕ್ಷೆ ನಡೆಸಿ ನ್ಯೂನ್ಯತೆ ಗುರುತಿಸಿ ನಂತರದ ದಿನದಲ್ಲಿ ಸರಿಪಡಿಸಿಕೊಳ್ಳಲು ತೀರ್ಮಾನಿಸಿದೆ.

ಆ.22 ರಂದು ದುರ್ಗಿಗುಡಿ, ಸವರ್‌ಲೈನ್‌ರಸ್ತೆ ದೇವಸ್ಥಾನದ ಹತ್ತಿರ, ಗಾರ್ಡನ್‌ಏರಿಯಾ, ಗೌರವ್ ಲಾಡ್ಜ್ ಎದುರು, ಗಾರ್ಡನ್ ಏರಿಯಾ ಸ್ಕ್ರಾಪ್ ಷಾಪ್ ಎದುರು, ಜ್ಯೂಯಲ್‌ರಾಕ್ ರಸ್ತೆ, ಪಂಚಮುಖಿ ಆಂಜನೇಯ ದೇವಸ್ಥಾನದ ಹತ್ತಿರ, ಮಿಷನ್ ಕಾಂಪೌಂಡ್, ಖಾಸಗಿ ಬಸ್ ನಿಲ್ದಾಣದ ಎದುರು. ಆ. 23ರಂದು ಜೈಲ್‌ರಸ್ತೆ, ಎಎನ್‌ಕೆ ರಸ್ತೆ, ವೆಂಕಟೇಶ್‌ನಗರ, ಗಾಂಧಿನಗರ, ಚೆನ್ನಪ್ಪ ಲೇಔಟ್, ರವೀಂದ್ರನಗರ, ಅಚ್ಯುತರಾವ್ ಲೇಔಟ್, ಗಾಂಧಿ ನಗರ ಮುಖ್ಯ ರಸ್ತೆ, ಶರಾವತಿನಗರ, ಹೊಸಮನೆ, ಕುವೆಂಪುರಸ್ತೆ, ಲಾಸ್ಟ್ ಮೈಲ್ ಕನೆಕ್ಟಿವಿಟಿ.

ಆ.24ರಂದು ಜಯನಗರ, ಬಸವನಗುಡಿ, ವಿನಾಯಕನಗರ, ಹನುಮಂತನಗರ, ಎ.ಎ. ಕಾಲೋನಿ. ಆ.25 ರಂದು ಸೋಮಯ್ಯ ಲೇಔಟ್, ಬಾಪೂಜಿ ನಗರ, ಟ್ಯಾಂಕ್‌ಮೊಹಲ್ಲಾ, ಕೋಟೆರಸ್ತೆ, ಸಿಎಲ್ ರಾಮಣ್ಣ ರಸ್ತೆ, ಎಸ್‌ಪಿಎಂ ರಸ್ತೆ, ಗುಂಡಪ್ಪ ಶೆಡ್, ಶೇಷಾದ್ರಿಪುರಂ. ಈ ಎಲ್ಲಾ ಪ್ರದೇಶಗಳ ಸಾರ್ವಜನಿಕರು, ಸಂಘ ಸಂಸ್ಥೆಗಳು ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿ.,ನಿಂದ ನಿರ್ವಹಿಸಿದ ಭೂಗತ ಕೇಬಲ್, ಬೀದಿದೀಪ ಕಂಬಗಳ ಕಾಮಗಾರಿಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟ ದೂರು, ಸಮಸ್ಯೆ ಇದ್ದಲ್ಲಿ ಲಿಖಿತವಾಗಿಯಾಗಲಿ ಅಥವಾ ಪರಿಶೀಲನೆಯ ದಿನ ಸೂಚಿತ ಸಮಯದಂದು ಸ್ಥಳದಲ್ಲಿ ಹಾಜರಿದ್ದಾಗಲಿ ಪರಿವೀಕ್ಷಣೆಗೆ ಸಹಕರಿಸುವಂತೆ ಸ್ಮಾರ್ಟ್‌ಸಿಟಿ ಲಿ., ವ್ಯವಸ್ಥಾಪಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಕರ್ನಾಟಕ ಸರ್ಕಾರ

**ಮುಖ್ಯ ಅಧೀಕ್ಷಕರ ಕಾರ್ಯಾಲಯ, ಕೇಂದ್ರ ಕಾರಾಗೃಹ ಮತ್ತು ಸುಧಾರಣಾ ಸೇವೆಗಳು, ಶಿವಮೊಗ್ಗ.**

Ph:08182-295502 Email:-cpsmg.prisons@ka.gov.in

ಸಂಖ್ಯೆ:ಕೇಕಾಶಿ/ದರಖಾಸ್ತು/2965/2023-24 ದಿ: 18.08.2023

**ಪ್ರಕಟಣೆ**

2023-24 ನೇ ಸಾಲಿಗೆ

1. ಬಂದಿಗಳಿಗೆ ತಲೆಕ್ಷೌರ ಮತ್ತು ಮುಖಕ್ಷೌರ ಮಾಡುವ ಕೆಲಸಗಳ ಕುರಿತ ಇ-ದರಖಾಸ್ತು ಸಂಖ್ಯೆ: PCSD/2023-24/SE0003/CALL-3 ಇ.ಎಂ.ಡಿ. ಮೊತ್ತ .70,800-00, (ಕರೆ-3) ಟೆಂಡರ್ ಕರೆದ ದಿನಾಂಕ: 18/08/2023, ಕೊನೆಯ ದಿನಾಂಕ:25/08/2023.

ಸದರಿ ದರಖಾಸ್ತಿನಲ್ಲಿ ಭಾಗವಹಿಸಲು ಈ ದರಖಾಸ್ತಿನ ಕುರಿತು ಹೆಚ್ಚಿನ ಮಾಹಿತಿಯನ್ನು ಆನ್‌ಲೈನ್ www.eproc.karnataka.gov.in ನಲ್ಲಿ ಪಡೆಯಲು ತಿಳಿಸಿದೆ. ಹಾಗೂ ಸದರಿ ದರಖಾಸ್ತಿನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಈ ಕೆಳಕಂಡ ವಿಳಾಸದಲ್ಲಿ ಪಡೆಯಲು ಸೂಚಿಸಿದೆ.

ಮುಖ್ಯ ಅಧೀಕ್ಷಕರು, ಕೇಂದ್ರ ಕಾರಾಗೃಹ ಮತ್ತು ಸುಧಾರಣಾ ಸೇವಾ ಕಛೇರಿ, ಸೋಗಾನೆ (ಗ್ರಾ), ನಿಧಿಗೆ ಅಂಚೆ, ಶಿವಮೊಗ್ಗ, ಪಿನ್ ಕೋಡ್: 577222

ದೂರವಾಣಿ ಸಂಖ್ಯೆ: 08182-295502 / 9480806465 / 8050515826

ಸಹಿ/- ಮುಖ್ಯ ಅಧೀಕ್ಷಕರು, ಕೇಂದ್ರ ಕಾರಾಗೃಹ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/61/08/23-24/342

## ಸಾಂಪ್ರದಾಯಿಕ ಉಡುಗೆಗಳು ಭಾರತೀಯ ಸಂಸ್ಕೃತಿಯ ಪ್ರತಿಬಿಂಬ: ಡಾ। ಅರುಣ್



ಶಿವಮೊಗ್ಗ: ಆಧುನಿಕತೆಯ ಅಬ್ಬರದಲ್ಲಿ ಸಾಂಪ್ರದಾಯಿಕ ಆಚಾರ ವಿಚಾರ, ಉಡುಗೆ ತೊಡುಗೆಗಳು ಕಣ್ಮರೆ ಆಗುತ್ತಿವೆ. ಸಾಂಪ್ರದಾಯಿಕ ಉಡುಗೆಗಳು ದೇಶದ ಸಂಸ್ಕೃತಿಯ ಪ್ರತಿಬಿಂಬಿಸುತ್ತವೆ ಎಂದು ಐಎಂಎ ಶಿವಮೊಗ್ಗ ಅಧ್ಯಕ್ಷ ಡಾ. ಅರುಣ್ ಹೇಳಿದರು.

ಶಿವಮೊಗ್ಗ ನಗರದ ರಾಜೇಂದ್ರ ನಗರದ ರೋಟರಿ ಸಭಾಂಗಣದಲ್ಲಿ ರೋಟರಿ ಶಿವಮೊಗ್ಗ ಪೂರ್ವದಿಂದ ಆಯೋಜಿಸಿದ್ದ ಕುಟುಂಬ ಸಮ್ಮಿಲನ ಕಾರ್ಯಕ್ರಮದಲ್ಲಿ ರಾಜ್ಯ, ರಾಷ್ಟ್ರದ ಸಂಸ್ಕೃತಿ ಪ್ರತಿಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮ, ವಿವಿಧ ಸ್ಪರ್ಧೆಗಳಿಗೆ ಚಾಲನೆ ನೀಡಿ ಮಾತನಾಡಿದರು.

ಕರ್ನಾಟಕ ರಾಜ್ಯವು ಸಾಂಸ್ಕೃತಿಕತೆಗಳ ತವರೂರು. ನಮ್ಮ ಸಂಸ್ಕೃತಿ ವಿದೇಶದಲ್ಲಿಯೂ ವಿಶೇಷ ಸ್ಥಾನಮಾನ ಗೌರವ ಇದೆ. ನಮ್ಮ ಸಂಸ್ಕೃತಿಯನ್ನು ಉಳಿಸುವ ಬೆಳೆಸುವ ಜವಾಬ್ದಾರಿಯು ನಮ್ಮೆಲ್ಲರ ಮೇಲಿದೆ ಎಂದು ತಿಳಿಸಿದರು.

ರೋಟರಿ ಮಾಜಿ ಸಹಾಯಕ ಗವರ್ನರ್ ಜಿ.ವಿಜಯ್‌ಕುಮಾರ್ ಮಾತನಾಡಿ, ಸಾಂಸ್ಕೃತಿಕ ಕಲೆಗಳು ನಮ್ಮಲ್ಲಿ ಸಂಸ್ಕಾರ ಬೆಳೆಸುವುದರ ಜತೆಗೆ ಶಾಶ್ವತ ನೆಲೆಗಳನ್ನು ನೀಡುತ್ತವೆ. ನಮ್ಮ ನೆಲದ ಗೌರವ ಕಾಪಾಡುತ್ತವೆ. ನಮ್ಮ ಉಡುಗೆ ತೊಡುಗೆಗಳೂ ಗೌರವ ತರುವಂತಿರಬೇಕು ಎಂದು ಹೇಳಿದರು.

ಸಾಂಸ್ಕೃತಿಕ ಸ್ಪರ್ಧೆಗಳು ಬಾಲ್ಯದ, ಶಾಲೆಯ ದಿನಗಳನ್ನು ನೆನಪು ತರುವಲ್ಲಿ ಹೆಚ್ಚು ಅವಕಾಶ ನೀಡುತ್ತವೆ. ಕುಟುಂಬದ ಸದಸ್ಯರು ಇಂತಹ ಸ್ಪರ್ಧೆಗಳಲ್ಲಿ ಭಾಗವಹಿಸಿ ಮಕ್ಕಳಿಗೆ ಸಂಸ್ಕೃತಿ ಪರಂಪರೆಯ ಅರಿವು ಮೂಡಿಸಬೇಕು ಎಂದರು.

ಕಿರುತೆರೆ ಕಲಾವಿದ ನಿರೂಪಕ ಪೃಥ್ವಿಗೌಡ ಅವರಿಂದ ವಿವಿಧ ತಮಾಷೆಯ ಗೇಮ್ಸ್ ಹಾಗೂ ಆಟೋಟಗಳು ಅಪಾರ ಸದಸ್ಯರ ಮೆಚ್ಚುಗೆ ಗಳಿಸಿದವು. ಹಳೆಯ ಚಿತ್ರಗೀತೆಗಳು ಎಲ್ಲರಿಗೂ ಇಷ್ಟ ಆಯಿತು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ರೋಟರಿ ಶಿವಮೊಗ್ಗ ಪೂರ್ವ ಅಧ್ಯಕ್ಷ ಸತೀಶ್ ಚಂದ್ರ ಮಾತನಾಡಿ, ರೋಟರಿ ಸಂಸ್ಥೆಯು ಸೇವೆಯ ಜತೆಯಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಿಗೂ ವಿಶೇಷ ಆದ್ಯತೆ ನೀಡುತ್ತದೆ. ಎಲ್ಲ ಸದಸ್ಯರಿಗೂ ಪ್ರತಿಭಾ ಪ್ರದರ್ಶನಕ್ಕೆ ಅವಕಾಶ ದೊರೆಯುತ್ತದೆ ಎಂದು ತಿಳಿಸಿದರು.

ಸಾಂಪ್ರದಾಯಿಕ ಉಡುಗೆ ಸ್ಪರ್ಧೆಯಲ್ಲಿ ಡಾ. ಕೌಸ್ತುಭ ಅರುಣ್ ದಂಪತಿ ಪ್ರಥಮ, ಬಿಂದು ವಿಜಯ್‌ಕುಮಾರ್ ದ್ವಿತೀಯ, ಗೀತಾ ತೃತೀಯ ಸ್ಥಾನ ಪಡೆದರು. 20ಕ್ಕೂ ಹೆಚ್ಚು ದಂಪತಿ ಭಾಗವಹಿಸಿದ್ದರು. ಡಾ. ಕಡಿದಾಳ್ ಗೋಪಾಲ್, ರೋಟರಿ ಶಿವಮೊಗ್ಗ ಪೂರ್ವ ಕಾರ್ಯದರ್ಶಿ ಕಿಶೋರ್ ಕುಮಾರ್, ಡಾ. ಗುಡದಪ್ಪ ಕಸಬಿ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ನಾವೀನ್ಯ ಯೋಜನೆಗಳು ಸಾಧ್ಯ

(ಮೊದಲ ಪುಟದಿಂದ)

ಕೆಎಸ್‌ಸಿಎಸ್‌ಟಿ ಪೇಟೆಂಟ್ ಮಾಹಿತಿ ಕೇಂದ್ರದ ಎಂ.ಜಿ. ನಾಗಾರ್ಜುನ ಮಾತನಾಡಿ, ಕಲೆ ವಾಣಿಜ್ಯ ವಿಜ್ಞಾನ ಸೇರಿದಂತೆ ಪ್ರತಿಯೊಂದು ಕ್ಷೇತ್ರದಲ್ಲಿ ಪೇಟೆಂಟ್ ಫೈಲಿಂಗ್ ಮಾಡಬಹುದಾಗಿದೆ. ಕೋಟ್ಯಾಂತರ ರೂಪಾಯಿ ಆರ್ಥಿಕ ವ್ಯವಹಾರ ಕೇವಲ ನಾವೀನ್ಯ ಯೋಚನೆಯ ಪೇಟೆಂಟ್ ಫೈಲಿಂಗ್ ಮಾಡುವುದರ ಮೂಲಕ ನಡೆಸುತ್ತಿರುವವರು ಅನೇಕರಿದ್ದಾರೆ. ನಾವೀನ್ಯ ಯೋಚನೆಗೆ ಅಂತಹ ಶಕ್ತಿಯಿದೆ. ದೇಶದ ಅಭಿವೃದ್ಧಿಯ ಪ್ರತಿಯೊಂದು ಹಂತದಲ್ಲಿ ನಾವೀನ್ಯ ಯೋಚನೆಗಳು ಸ್ಥಾನ ಪಡೆದಿದೆ ಎಂದು ಹೇಳಿದರು.

ಎನ್‌ಇಎಸ್ ಶೈಕ್ಷಣಿಕ ಆಡಳಿತಾಧಿಕಾರಿ ಎ.ಎನ್.ರಾಮಚಂದ್ರ ಮಾತ ನಾಡಿದರು. ಪ್ರಾಂಶುಪಾಲ ಡಾ. ಪಿ. ಮಂಜುನಾಥ ಅಧ್ಯಕ್ಷತೆ ವಹಿಸಿದ್ದರು. ಪ್ರಮುಖರಾದ ಕೆ.ಎಲ್.ಅರುಣ್ ಕುಮಾರ್, ನೃಪತುಂಗ ಹಾಗೂ ಇನ್ನಿತರರಿದ್ದರು.

## ಬೀದಿ ಬದಿ ವ್ಯಾಪಾರಿಗಳಿಗೆ ಗುರುತಿಸಿರುವ ಜಾಗಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಿ



ಶಿವಮೊಗ್ಗ: ಬೀದಿ ಬದಿ ವ್ಯಾಪಾರಿ ಗಳಿಗೆ ಗುರುತಿಸಿರುವ ಜಾಗಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ಆಗ್ರಹಿಸಿ ಪಟ್ಟಣ ಮಾರಾಟ ಸಮಿತಿಯ ಸದಸ್ಯ ಚನ್ನವೀರಪ್ಪ ಗಾಮನಗಟ್ಟಿ ನೇತೃತ್ವದಲ್ಲಿ ಬೀದಿ ಬದಿ ವ್ಯಾಪಾರಿಗಳು ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಈ ಹಿಂದೆ ಟಿವಿಸಿ ಸಭೆಯಲ್ಲಿ ವೆಂಡಿಂಗ್ ಝೋನ್ ಗುರುತಿಸಿ ಬೀದಿಬದಿ ವ್ಯಾಪಾರಸ್ಥರಿಗೆ ಜಾಗ ನೀಡಲಾಗಿತ್ತು. ಆದರೆ ಅಲ್ಲಿ ಮೂಲಭೂತ ಸೌಕರ್ಯಗಳು ಇಲ್ಲ. ಫುಟ್‌ಪಾತ್‌ಗಳಲ್ಲೂ ಅವಕಾಶ ಸಿಗುತ್ತಿಲ್ಲ. ದೊಡ್ಡ ದೊಡ್ಡ ಅಂಗಡಿ ಮಾಲೀಕರು ಫುಟ್‌ಪಾತ್ ಕೂಡ ಆಕ್ರಮಿಸಿಕೊಂಡಿದ್ದಾರೆ. ನಿಜವಾದ ಬೀದಿಬದಿ ವ್ಯಾಪಾರಿಗಳಿಗೆ ಅವಕಾಶ ಸಿಗುತ್ತಿಲ್ಲ. ಸ್ಮಾರ್ಟ್ ಸಿಟಿ ವತಿಯಿಂದ 120ಕ್ಕೂಹೆಚ್ಚು ಕನ್ಸರ್ವೆನ್ಸಿಗಳನ್ನು ಅಭಿವೃದ್ಧಿಪಡಿಸಲಾಗಿದೆ. ಅಲ್ಲಿಯೂ ಕೂಡ ಬೀದಿ ಬದಿ ವ್ಯಾಪಾರಿಗಳಿಗೆ ಅವಕಾಶ ನೀಡಿಲ್ಲ ಎಂದು ದೂರಿದರು.

ಬೀದಿ ಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ಸಿಕ್ಕಿಲ್ಲ. ವಿನೋಬನಗರದ ಶಿವಾಲಯದ ಬಳಿ ಇರುವ 70 ಸಂತೆ ಮಳಿಗೆ ವ್ಯಾಪಾರಿಗಳಿಗೆ ಅವಕಾಶ ನೀಡಲಾಗಿದೆ. ಆದರೆ ಈ ಬಗ್ಗೆ ಮಾಹಿತಿ ಇಲ್ಲ. ಟಿವಿಸಿ ಸದಸ್ಯರನ್ನು ಬಿಟ್ಟು ಮಳಿಗೆಗಳನ್ನು ಹಂಚಲಾಗಿದೆ. ಈ ಬಗ್ಗೆ ದೂರನ್ನೂ ನೀಡಲಾಗಿದೆ. ಆದರೆ ಸಂಬಂಧಪಟ್ಟವರು ಇದುವರೆಗೂ ಉತ್ತರ ನೀಡಿಲ್ಲ ಎಂದು ಆರೋಪಿಸಿದರು.

ಆಹಾರ ಸುರಕ್ಷತಾ ತರಬೇತಿ ನಿಜವಾದ ಬೀದಿಬದಿ ವ್ಯಾಪಾರಿಗಳಿಗೆ ದೊರೆತಿಲ್ಲ. ಹಾಗೂ ಸ್ವನಿಧಿ ಮಹೋತ್ಸವ ಕಾರ್ಯಕ್ರಮದ ಬಗ್ಗೆ ಸಂಪೂರ್ಣ ತನಿಖೆ ಆಗಬೇಕು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಪ್ರಮುಖರಾದ ನಾರಾಯಣ, ವಿನಯಕುಮಾರ್, ಅಶೋಕ್ ಕುಮಾರ್, ಮುಹಮ್ಮದ್ ಇಸ್ಮಾಯಿಲ್, ಶೇಷಯ್ಯ, ಚಂದ್ರಕಲಾ ಇದ್ದರು.

## ಜಿಲ್ಲೆಯಾದ್ಯಂತ ನಾಗರಪಂಚಮಿ ಹಬ್ಬ ಸಂಭ್ರಮದ ಆಚರಣೆ



ಶಿವಮೊಗ್ಗ: ಶ್ರಾವಣ ಮಾಸದ ಐದನೇ ದಿನಕ್ಕೆ ಬರುವ ಮೊದಲ ಹಬ್ಬವಾದ ಅದರಲ್ಲೂ ಮಹಿಳೆಯರ ಪ್ರಮುಖ ಹಬ್ಬ ನಾಗರ ಪಂಚಮಿಯನ್ನು ನಗರ ಸೇರಿದಂತೆ ಜಿಲ್ಲೆಯಾದ್ಯಂತ ಇಂದು ಸಂಭ್ರಮದಿಂದ ಆಚರಿಸಲಾಯಿತು.

ಮಹಿಳೆಯರು ಹೊಸ ಬಟ್ಟೆ, ಬಳೆ ತೊಟ್ಟು ಹುತ್ತಕ್ಕೆ ಹಾಲೆರೆದರು. ಮನೆಯವರೆಲ್ಲರೂ ಸೇರಿ ವಿಶೇಷ ಪೂಜೆ ಸಲ್ಲಿಸಿ, ನಾಗ ದೇವರಿಗೆ ನಮಿಸಿದರು. ಈ ಮೂಲಕ ಶ್ರದ್ಧಾ-ಭಕ್ತಿಯ ಹಬ್ಬ ಆಚರಣೆ ನಡೆಯಿತು.

ಹಬ್ಬದ ನಿಮಿತ್ತ ಬೆಳಗ್ಗೆಯಿಂದಲೇ ಮಹಿಳೆಯರು, ಯುವತಿಯರು, ಹಿರಿಯರು ಮತ್ತು ಕಿರಿಯರು ತಂಡೋಪತಂಡವಾಗಿ ಆಯಾ ಬಡಾವಣೆಗಳ ನಾಗ ದೇವರ ಮಂದಿರ ಹಾಗೂ ಹುತ್ತಗಳ ತೆರಳಿ ಹಾಲೆರೆದರು.

ನಂತರ ಹುತ್ತದ ಬಳಿ ತೆರಳಿ ಕುಂಕುಮ- ಅರಶಿಣ ಹಚ್ಚಿದರಲ್ಲದೆ, ಕಂಕಣ, ಹೋಳಿಗೆ ತುಪ್ಪ, ಕಡಬು, ಅರಳು, ಹೂ, ಕಾಯಿ,ಂ ಕರ್ಪೂರ ಹಾಗೂ ಕೊಬ್ಬರಿಯನ್ನು ನಾಗ ದೇವತೆಗೆ ಅರ್ಪಿಸಿದರು.

ಗ್ರಾಮೀಣ ಭಾಗದಲ್ಲಿ ಸಂಜೆ ವೇಳೆ ಮಹಿಳೆಯರು, ಯುವತಿಯರು ಒಂದೆಡೆ ಸೇರಿ ಹಾಡುಗಳನ್ನು ಹಾಡಿ ಸಂಭ್ರಮಿಸಿದರು. ಯುವತಿಯರು, ಮಕ್ಕಳು ಜೋಕಾಲಿ ಆಡಿ ನಲಿದರು. ಒಟ್ಟಿನಲ್ಲಿ ಪಂಚಮಿ ಹಬ್ಬವನ್ನು ಸಂಭ್ರಮದಿಂದ ಆಚರಣೆ ಮಾಡಲಾಯಿತು.

ನಾಗರಪಂಚಮಿಯಂದು ಹುತ್ತಕ್ಕೆ ಹಾಲೆರೆಯುವುದು ಸಂಪ್ರದಾಯವಾಗಿದೆ. ನಾಗರ ಪಂಚಮಿ ನಾಡಿಗೆ ದೊಡ್ಡದು ಎನ್ನುವ ಮಾತಿದ್ದು, ಈ ಹಬ್ಬವನ್ನು ವಿಶೇಷವಾಗಿ ಮಹಿಳೆಯರ ಹಬ್ಬ ಎಂದೇ ಬಿಂಬಿಸಲಾಗಿದೆ.

## ಕೆಡಬ್ಲ್ಯುಜೆಎಯಿಂದ ಆಯ್ದ ಪತ್ರಕರ್ತರಿಗೆ ಉಚಿತ ಕನ್ನಡಕಗಳ ವಿತರಣೆ




ಶಿವಮೊಗ್ಗ: ಪತ್ರತರ್ಕರಿಗೆ ಯಶಸ್ವಿನಿ ಯೋಜನೆ ಸೌಲಭ್ಯ ಕಲ್ಪಿಸಲಾಗುವುದು ಎಂದು ಕೆಡಬ್ಲ್ಯುಜೆಎ ಜಿಲ್ಲಾ ಶಾಖೆ ಅಧ್ಯಕ್ಷ ಕೆ.ವಿ. ಶಿವಕುಮಾರ್ ಹೇಳಿದರು.

ಪ್ರಸಾದ್ ನೇತ್ರಾಲಯ, ಉಡುಪಿ ಮಲ್ನಾಡ್ ಕಣ್ಣಿನ ಆಸ್ಪತ್ರೆ ಇವರ ಸಹಯೋಗದಲ್ಲಿ ಪತ್ರಕರ್ತರಿಗೆ ಉಚಿತ ಕನ್ನಡಕ ವಿತರಿಸಿ ಮಾತನಾಡಿದ ಅವರು, ಸರ್ಕಾರ ಪತ್ರಕರ್ತರನ್ನು ಯಶಸ್ವಿ ಯೋಜನೆಯಡಿ ಸೇರಿಸಿದ್ದು, ಇದರ ಸದುಪಯೋಗ ಪಡೆಯಬೇಕೆಂದರು.

ಸದಾ ಒತ್ತಡದಲ್ಲೇ ಕಾರ್ಯನಿರ್ವಹಿಸುವ ಪತ್ರಕರ್ತರು ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಅದರಲ್ಲೂ ಕಣ್ಣಿನ ಬಗ್ಗೆ ಹೆಚ್ಚಿನ ಕಾಳಜಿ ಅಗತ್ಯ. ಪತ್ರಕರ್ತರಿಗೆ ಓದು, ಬರವಣಿಗೆ, ವೀಕ್ಷಣೆ ಮುಖ್ಯವಾಗಿದ್ದು, ಈ ನಿಟ್ಟಿನಲ್ಲಿ ಕಣ್ಣಿನ ಬಗ್ಗೆ ಹೆಚ್ಚಿನ ಜಾಗೃತೆ ವಹಿಸಬೇಕು ಎಂದು ಸಲಹೆ ನೀಡಿದರು.

ಸರ್ಕಾರದಿಂದ ಪತ್ರಕರ್ತರಿಗೆ ಹಲವು ಸೌಲಭ್ಯ ಕಲ್ಪಿಸಲಾಗಿದೆ. ಯಶಸ್ವಿನಿ ಯೋಜನೆಯನ್ನು ಸಂಘದ ಮೂಲಕ ಜಾರಿಗೊಳಿಸಲಾಗುವುದು. ಇದರಿಂದ ಪತ್ರಕರ್ತರು ಮತ್ತು ಅವರ ಕುಟುಂಬದವರು ಚಿಕಿತ್ಸೆ ಪಡೆದು ಕೊಳ್ಳಲು ಅನುಕೂಲ ಎಂದರು.

ಸಂಘದ ನಗರ ಕಾರ್ಯದರ್ಶಿ ಕೆ. ಆರ್. ಸೋಮನಾಥ್ ಮಾತನಾಡಿ, ಇತ್ತೀಚೆಗೆ ಸಂಘದಿಂದ ಉಚಿತ ನೇತ್ರ ತಪಾಸಣೆ ಶಿಬಿರ ನಡೆಸಲಾಗಿತ್ತು. 62 ಪತ್ರಕರ್ತರಿಗೆ ಕನ್ನಡಕಗಳನ್ನು ಉಚಿತವಾಗಿ ನೀಡಿದ್ದು ಇಂದು ವಿತರಿಸಲಾಗುತ್ತಿದೆ ಎಂದರು.

ಸಂಘದ ಜಿಲ್ಲಾ ಉಪಾಧ್ಯಕ್ಷ ಆರ್.ಎಸ್.ಹಾಲಸ್ವಾಮಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿ.ಟಿ. ಅರುಣ್, ಗ್ರಾಮಾಂತರ ಉಪಾಧ್ಯಕ್ಷ ಕೆ.ಎಸ್. ಹುಚ್ರಾಯಪ್ಪ, ದೀಪಕ್ ಸಾಗರ್ ಮೊದಲಾದವರಿದ್ದರು.

## ಬಾರ್ ಅಂಡ್ ರೆಸ್ಟೋರೆಂಟ್ ತೆರವಿಗೆ ಆಗ್ರಹಿಸಿ ಸ್ಥಳೀಯ ನಿವಾಸಿಗರ ಪ್ರತಿಭಟನೆ

ಶಿವಮೊಗ್ಗ: ವಾರ್ಡ್ ನಂ. 34 ಮತ್ತು 35ರ ಸೂಳೆಬೈಲು ಮದಾರಿ ಪಾಳ್ಯದಲ್ಲಿ ಬಾರ್ ಅಂಡ್ ರೆಸ್ಟೋರೆಂಟ್ ತೆರವುಗೊಳಿಸಬೇಕೆಂದು ಒತ್ತಾಯಿಸಿ ಸ್ಥಳೀಯ ನಿವಾಸಿಗಳು ಇಂದು ಪ್ರತಿಭಟನೆ ನಡೆಸಿದ್ದಾರೆ.

ಶಾಲೆ, ಅಂಗನವಾಡಿ, ದೇವಸ್ಥಾನ,ದರ್ಗಾಗಳ ಸಮೀಪವೇ ಶ್ರೀನಿಧಿ ಬಾರ್ ಅಂಡ್ ರೆಸ್ಟೋರೆಂಟ್ ಇದ್ದು, ಇದನ್ನು ತೆರವುಗೊಳಿಸಬೇಕೆಂದು ಪ್ರತಿಭಟನಾನಿರತರು ಆಗ್ರಹಿಸಿದರು.

ಬೈಪಾಸ್ ರಸ್ತೆ ಊರಗಡೂರು ಸಮೀಪದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆ, ಅಂಗನವಾಡಿ, ಎರಡು ದೇವಸ್ಥಾನಗಳು ಹಾಗೂ ದರ್ಗಾ ಇದ್ದು, ಹೆಚ್ಚಿನ ಸಂಖ್ಯೆಯ ಭಕ್ತರು, ಶಾಲಾ ಮಕ್ಕಳು ಬಂದು ಹೋಗುತ್ತಾರೆ. ಇವುಗಳ ಸಮೀಪವೇ 100 ಮೀ ಒಳಗೆ ಕಾನೂನು ಬಾಹಿರವಾಗಿ ಬಾರ್ ಅಂಡ್ ರೆಸ್ಟೋರೆಂಟ್ ಇದ್ದು, ಅಬಕಾರಿ ಇಲಾಖೆಯಿಂದ ಪರವಾನಿಗೆ ಪಡೆದು ಇನ್ನೊಂದು ಹೊಸ ಬಾರ್ ಪ್ರಾರಂಭಿಸಲು ಸಜ್ಜಾಗಿದ್ದಾರೆ ಎಂದು ದೂರಿದರು.

ಬಾರ್ ಅಂಡ್ ರೆಸ್ಟೋರೆಂಟ್ ನಿಂದ ಶಾಲೆ, ಅಂಗನವಾಡಿ ಮಕ್ಕಳಿಗೆ ಹಾಗೂ ದೇವಾಲಯ ದರ್ಗಾಗಳಿಗೆ ಬರುವ ಭಕ್ತರಿಗೆ ತೊಂದರೆಯಾಗುತ್ತಿದೆ. ಸಾರ್ವಜನಿಕರ ವಿರೋಧದ ಹಿನ್ನೆಲೆಯಲ್ಲಿ ಬಾರ್ ಅಂಡ್ ರೆಸ್ಟೋರೆಂಟ್ ತೆರವುಗೊಳಿಸಬೇಕೆಂದು ಆಗ್ರಹಿಸಿದರು.

ಸ್ಥಳಕ್ಕೆ ಅಬಕಾರಿ ಇಲಾಖೆ ಅಧಿಕಾರಿಗಳು, ಪೊಲೀಸರು ಭೇಟಿ ನೀಡ ಪ್ರತಿಭಟನಾನಿರತರೊಂದಿಗೆ ಚರ್ಚಿಸಿದರು.

## ಓಪಿಎಸ್ ಜಾರಿ ಸೇರಿದಂತೆ ಸರ್ಕಾರಿ ನೌಕರರ ಸಂಘದ ಬೇಡಿಕೆಗಳ ಈಡೇರಿಕೆಗೆ ಕಾಂಗ್ರೆಸ್ ಸರ್ಕಾರ ಬದ್ದವಾಗಿದೆ

### ಸರಕಾರಿ ನೌಕರರ ಸಂಘದ ನವೀಕರಣ ಕಟ್ಟಡ ಉದ್ಘಾಟನೆ - ನೂತನ ಪದಾಧಿಕಾರಿಗಳ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಶಾಸಕ ಶಾಂತನಗೌಡ ಭರವಸೆ



ಹೊನ್ನಾಳಿ: ರಾಜ್ಯ ಸರ್ಕಾರಿ ನೌಕರರ ಪ್ರಮುಖ ಬೇಡಿಕೆಯಾದ ಓಪಿಎಸ್ ಜಾರಿಗೆ ತರುವುದು ಹಾಗೂ ಇತರ ಬೇಡಿಕೆಯನ್ನು ಈಡೇರಿಸುವುದಕ್ಕೆ ನಮ್ಮ ಸರಕಾರ ಬದ್ಧವಾಗಿದೆ ಎಂದು ಶಾಸಕ ಶಾಂತನಗೌಡ ಹೇಳಿದರು.

ಪಟ್ಟಣದ ಸರಕಾರಿ ನೌಕರರ ಭವನದಲ್ಲಿ ಹಮ್ಮಿಕೊಂಡಿದ್ದ ಸರಕಾರಿ ನೌಕರರ ಸಂಘದ ನವೀಕರಣ ಕಟ್ಟಡ ಉದ್ಘಾಟನೆ ಹಾಗೂ ಸರ್ಕಾರಿ ನೌಕರರ ತಾಲೂಕು ಸಂಘದ ನೂತನ ಪದಾಧಿಕಾರಿಗಳ ಅಧಿಕಾರ ಸ್ವೀಕಾರ ಸಮಾರಂಭದ ಉದ್ಘಾಟನಾ ಕಾರ್ಯಕ್ರಮ ನೆರವೇರಿಸಿ ಮಾತನಾಡಿದ ಅವರು, ಸರ್ಕಾರದ ಎಲ್ಲ ಇಲಾಖೆಗಳಿಗೆ ಜನ ಸಾಮಾನ್ಯರು ತಮ್ಮ ತಮ್ಮ ಕೆಲಸಗಳಿಗೆ ಬರುತ್ತಾರೆ, ಅವರನ್ನು ಕಾಯಿಸದೆ ಅವರ ಕೆಲಸವನ್ನು ಮೊದಲು ಮಾಡಿಕೊಡಿ. ಅವರ ದೂರು ನನ್ನಲ್ಲಿಗೆ ಬರದ ಹಾಗೆ ಕೆಲಸ ಮಾಡಿಕೊಡಿ ಎಂದು ನೌಕರರಿಗೆ ಸೂಚಿಸಿದರು.

ರಾಜ್ಯದಲ್ಲಿ ವರುಣನ ಕಣ್ಣಾಮುಚ್ಚಾಲೆ ಆಟ ಪ್ರಾರಂಭವಾಗಿದೆ. ರಾಜ್ಯಾದ್ಯಂತ ಮಳೆ ಕೈಕೊಟ್ಟು ಬರದ ಛಾಯೆ ಮೂಡುವ ರೀತಿ ಆಗಿದೆ. ಕೂಡಲೇ ಮಳೆ ಬರಲಿ ಎಂದು ಭಗವಂತನಲ್ಲಿ ಪ್ರಾರ್ಥಿಸಿದರು.

ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಮಾತನಾಡಿ, ಹೊನ್ನಾಳಿ ತಾಲೂಕು ಸರ್ಕಾರಿ ನೌಕರರ ಸಂಘ ಪ್ರತಿ ವರ್ಷ ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಂಡು ಬರುತ್ತಿದೆ. ಯಾರೇ ಅಧ್ಯಕ್ಷರಾಗಲಿ ಅವರ ಕಾಲದಲ್ಲಿ ಒಂದು ಕಟ್ಟಡ ಉದ್ಘಾಟನೆ ಅಥವಾ ನವೀಕರಣ ಇದ್ದೇ ಇರುತ್ತದೆ. ನನ್ನ ಅಧಿಕಾರದ ಅವಧಿಯಲ್ಲಿ ಆರೋಗ್ಯ ಕಂದಾಯ ಹಾಗೂ ಇನ್ನಿತರೆ ಇಲಾಖೆಗಳು ಕೋವಿಡ್ ಸಮಯದಲ್ಲಿ ಕೋವಿಡ್ ಸಂತ್ರಸ್ತರಿಗೆ ಸ್ಪಂದಿಸಿ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೀರಿ ಅದಕ್ಕಾಗಿ ನಾನು ನಿಮ್ಮನ್ನು ಅಭಿನಂದಿಸುತ್ತೇನೆ ಎಂದರು.

ನನ್ನ ಅವಧಿಯಲ್ಲಿ ಹೊನ್ನಾಳಿ ಹಾಗೂ ನ್ಯಾಮತಿ ತಾಲೂಕು ಸರ್ಕಾರಿ ನೌಕರರ ಸಂಘದ ಕಟ್ಟಡಕ್ಕೆ ತಲಾ 1.50 ಕೋಟಿ ಅನುದಾನ ಮಾಡಿಸಿದ್ದೆ ಆದರೆ ತಾಂತ್ರಿಕ ಕಾರಣದಿಂದ ಆರ್ಥಿಕ ಇಲಾಖೆ ಅನುದಾನ ಬಿಡುಗಡೆ ಮಾಡಿಸಿಲ್ಲ. ಅದನ್ನು ಈಗಿನ ಶಾಸಕರು ಅನುದಾನ ಬಿಡುಗಡೆ ಮಾಡಿಸುವಂತೆ ಮನವಿ ಮಾಡಿದರು.

ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ವೀರೇಶ್ ಎಸ್. ಒಡೆಯನಾಪುರ ಹಾಗೂ ಸರ್ಕಾರಿ ನೌಕರರ ಸಂಘದ ಬಿ. ಕುಮಾರ್ ಹಾಗೂ ನೂತನ ಆರ್ ಎಸ್ ಅಧ್ಯಕ್ಷ ಪಾಟೀಲ್ ಮಾತನಾಡಿದರು.

ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ ಪಡೆದ ಸಮುದಾಯ ಆರೋಗ್ಯ ಅಧಿಕಾರಿ ಟಿ ನಾಗರತ್ನ, ರಾಜ್ಯ ಪ್ರಶಸ್ತಿ ಪಡೆದ ಗ್ರಂಥಪಾಲಕ ನಾಗರಾಜ್ ನಾಯಕ, ಸಂಘದ ನಿಕಟಪೂರ್ವ ಅಧ್ಯಕ್ಷ ಬಿ, ಕುಮಾರ್, ರಾಜ್ಯ ಪರಿಷತ್ ಸದಸ್ಯ ಟಿ. ಪಿ. ರವಿಕುಮಾರ್ ಅವರುಗಳನ್ನು ಸನ್ಮಾನಿಸಲಾಯಿತು.

ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಹೊನ್ನಾಳಿ ತಾಲೂಕು ನೂತನ ಅಧ್ಯಕ್ಷರಾಗಿ ಆರ್. ಎಸ್. ಪಾಟೀಲ್, ರಾಜ್ಯ ಪರಿಷತ್ ಸದಸ್ಯರಾಗಿ ಎಸ್.ವಿ. ವೀರೇಶ್, ಉಪಾಧ್ಯಕ್ಷರಾಗಿ ಕೆ.ಅರುಣ್ ಅಧಿಕಾರ ಸ್ವೀಕರಿಸಿದರು.

ನ್ಯಾಮತಿ ಸಂಘದ ಅಧ್ಯಕ್ಷ ಎಂ. ಬಿ. ನಿಂಗಪ್ಪ, ರವಿಕುಮಾರ್, ಪ್ರಕಾಶ್ ನಾಯಕ, ಅರುಣ್ ಕುಮಾರ್, ನಾಗರಾಜ್ ನಾಯಕ, ಹಾಗೂ ಇತರರು ಉಪಸ್ಥಿತರಿದ್ದರು.

Office @ : 2nd floor Pushpagiri Complex, Opposite Sacred Heart Church, B.H. Road, Shimoga - 577 201. Karnataka State. Phone: 948 248 2182
Edited, Published, Printed & Owned by ALPHONSE RAKESH D'SOUZA. "Rekha", Old barline Road, Opposite Kalappa compound, Shimoga 577201.
Printed by him at Yogitha Printers, Behind KSRTC Bus stand, Vijaya Rice Mill Building, Budha Nagar, Shimoga 577201.